KACM400018792023

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ., ಮೂಡಿಗೆರೆ.

**-: ಉಪಸ್ಥಿತರು :-**

ಶ್ರೀ ಯೋಗೇಶ ಎಂ.ಆರ್., ಬಿ.ಎ.ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.,
ಮೂಡಿಗೆರೆ.

**ದಿನಾಂಕ 25 ನೇ ಜುಲೈ 2026.**

**ಕ್ರಿಮಿನಲ್ ಪ್ರಕರಣ ಸಂಖ್ಯೆ 1216/2023**

**ಪಿರ್ಯಾದಿದಾರರು** : ರಾಜ್ಯದ ಪರ ಮೂಡಿಗೆರೆ ಠಾಣಾ ಆರಕ್ಷಕರು
(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)

**ವಿರುದ್ಧ**

**ಆರೋಪಿಗಳು** : **1.** ರಕ್ಷಿತ್.ಎಲ್. ಆರ್. **(ಮೃತಪಟ್ಟಿರುತ್ತಾರೆ.)**
ಬಿನ್ ರಾಮು, ವಯಸ್ಸು ಸುಮಾರು 24 ವರ್ಷ,
ವಾಸಃ ಲಕ್ಷ್ಮೀಪುರ ಗ್ರಾಮ, ಗೋಣಿಬೀಡು ಹೋಬಳಿ,
ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**2.** ಪೀಟರ್ ಮೋನಿಸ್ ಬಿನ್ ಸವೇರ್ ಮೋನಿಸ್,
7 ವಯಸ್ಸು ಸುಮಾರು 64 ವರ್ಷ,
ವಾಸಃ ಅತ್ತಿಗೆರೆ ಗ್ರಾಮ.
ಹಾಲಿ ವಾಸಃ ಚಕ್ಕೂಡು ಗ್ರಾಮ, ಬಣಕಲ್ ಹೋಬಳಿ,
ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**3.** ವೆಂಕಟೇಶ್.ಜಿ.ಬಿ ಬಿನ್ ಬೋಬೇಗೌಡ,
ವಯಸ್ಸು ಸುಮಾರು 58 ವರ್ಷ,
ವಾಸಃ ಗುಡ್ಡಟ್ಟಿ ಗ್ರಾಮ,
ಬಣಕಲ್ ಹೋಬಳಿ, ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.
*(ಆ-1, 2 ರವರ ಪರವಾಗಿ ಶ್ರೀ **ಎಂ.ವಿ.ಜಿ.,** ವಕೀಲರು)*

| | | | |
|---|---|---|---|
| **1.** | ಕೃತ್ಯ ನಡೆದ ದಿನಾಂಕ | : | 02.07.2022 |
| **2.** | ಕೃತ್ಯ ವರದಿ ಮಾಡಿದ ದಿನಾಂಕ | : | 02.07.2022 |
| **3.** | ದೂರುದಾರರ ಹೆಸರು | : | ರಾಮು.ಎಲ್.ಎ |
| **4.** | ಸಾಕ್ಷಿದಾರರ ಹೇಳಿಕೆಯ ದಿನಾಂಕ | : | 18.06.2025 |
| **5.** | ಸಾಕ್ಷಿದಾರರ ಹೇಳಿಕೆಯು ಮುಕ್ತಾಯವಾದ ದಿನಾಂಕ | : | 10.07.2025 |
| **6.** | ಆಪಾದಿಸಲಾದ ಕಲಂಗಳು | : | ಭಾರತ ದಂಡ ಸಂಹಿತೆ ಕಲಂ.279, 283 ಮತ್ತು 304(ಎ) ಹಾಗೂ ಮೋ.ವಾ.ಅ. ಕಲಂ.196 ಮತ್ತು 192(1). |
| **7.** | ನ್ಯಾಯಾಲಯದ ತೀರ್ಮಾನ | : | ನಿರ್ದೋಷಿ. |

YOGESH M R
Digitally signed by YOGESH M R
Date: 2026.07.25 17:39:24 +0530

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಮೂಡಿಗೆರೆ.

**-: ತೀರ್ಪು :-**

ಆರೋಪಿಗಳ ವಿರುದ್ಧ ಮೂಡಿಗೆರೆ ಪೊಲೀಸ್ ಠಾಣಾ ಆರಕ್ಷಕರು, ಭಾರತ ದಂಡ ಸಂಹಿತೆ ಕಲಂ.279, 283 ಮತ್ತು 304(ಎ) ಹಾಗೂ ಮೋಟಾರು ವಾಹನಗಳ ಅಧಿನಿಯಮ ಕಲಂ.196 ಮತ್ತು 192(1) ರಡಿಯಲ್ಲಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

**2. ಮಾನ್ಯ ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿರುತ್ತಿದೆ :-**

ದಿನಾಂಕ 02.07.2022 ರಂದು ರಾತ್ರಿ ಸುಮಾರು 9.30 ರ ಸಮಯದಲ್ಲಿ ಮೂಡಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಬಿದರಹಳ್ಳಿ ಗ್ರಾಮದ ಕೆ.ಎಸ್.ಆರ್.ಟಿ.ಸಿ ಡಿಪೋದ ಹತ್ತಿರ, ಎನ್.ಹೆಚ್-73 ಟಾರು ರಸ್ತೆಯ ಮೇಲೆ, ಕೊಟ್ಟಿಗೆಹಾರ ಕಡೆಯಿಂದ ಮೂಡಿಗೆರೆ ಕಡೆಗೆ ಬರುವಂತೆ ರಸ್ತೆಯ ಎಡಭಾಗದಲ್ಲಿ, 2 ನೇ ಆರೋಪಿಯು 3 ನೇ ಆರೋಪಿಗೆ ಸೇರಿದ ವಾಹನ ನೊಂದಣಿ ಸಂಖ್ಯೆ ಕೆಎ-18-ಟಿಬಿ-2393 ನೇ ಜಾನ್ ಧೀರೇ ಟ್ರಾಕ್ಟರ್ ಮತ್ತು ಮರದ ತುಂಡುಗಳನ್ನು ನೋಂದಣಿ ಸಂಖ್ಯಾ ಫಲಕವಿಲ್ಲದ ಟ್ರೇಲರ್ಗೆ ತುಂಬಿಸಿ, ಟ್ರೇಲರ್ ಪಂಚರ್ ಆಗಿದ್ದರಿಂದ ಯಾವುದೇ ಮುಂಜಾಗ್ರತೆ ಮತ್ತು ಎಚ್ಚರಿಕೆಯ ಸೂಚನಾ ಕ್ರಮಗಳನ್ನು ಕೈಗೊಳ್ಳದೇ ಅಪಾಯಕಾರಿಯಾಗಿ ಸಾರ್ವಜನಿಕ ರಸ್ತೆಗೆ ತೊಂದರೆಯಾಗುವ ರೀತಿಯಲ್ಲಿ ಸಾರ್ವಜನಿಕ ರಸ್ತೆಯಲ್ಲಿ ನಿಲ್ಲಿಸಿದ್ದು, ಆಗ ಮೃತ 1 ನೇ ಆರೋಪಿ ತನ್ನ ವಾಹನ ನೋಂದಣಿ ಸಂಖ್ಯೆ ಕೆಎ-18-ಇಜಿ-2544 ನೇ ಹೋಂಡಾ ಶೈನ್ ಬೈಕ್ ಅನ್ನು ಚಾಲನೆ ಮಾಡಿಕೊಂಡು ಬಂದು ಸದರಿ ಟ್ರೇಲರ್ಗೆ ಡಿಕ್ಕಿಪಡಿಸಿದ ಪರಿಣಾಮ ಅಪಘಾತವಾಗಿದ್ದು, ಸದರಿ ಅಪಘಾತದಿಂದಾದ ಗಾಯಗಳಿಂದಾಗಿ 1 ನೇ ಆರೋಪಿಯು ಮೃತಪಟ್ಟಿರುತ್ತಾರೆ. ನಂತರ 2 ನೇ ಆರೋಪಿಯು 3 ನೇ ಆರೋಪಿಗೆ ಸೇರಿದ ವಿಮೆ ಇಲ್ಲದೇ ಮತ್ತು ನೋಂದಣಿ ಮಾಡಿಸದೇ ಇರುವ ವಾಹನವನ್ನು ಚಾಲನೆ ಮಾಡಿಕೊಂಡು

ಬಂದಿದ್ದು ಹಾಗೂ 3 ನೇ ಆರೋಪಿ ವಿಮೆ ಇಲ್ಲದ ಮತ್ತು ನೋಂದಣಿ ಮಾಡಿಸದ ತನ್ನ ವಾಹನವನ್ನು ಚಾಲನೆ ಮಾಡಲು 2 ನೇ ಆರೋಪಿಗೆ ಅನುಮತಿಸಿರುತ್ತಾರೆಂದು ಆರೋಪಿಗಳ ವಿರುದ್ಧ ಮೂಡಿಗೆರೆ ಠಾಣಾ ಆರಕ್ಷಕರು ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

**3.** ಮೂಡಿಗೆರೆ ಠಾಣಾ ಆರಕ್ಷಕರು, ಚಾಸಾ.18 ಗುರುರಾಜ್., ಇವರು ಠಾಣಾ ಉಸ್ತುವಾರಿಯಲ್ಲಿದ್ದಾಗ, ಚಾಸಾ.1 ರವರು ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ:113/2022 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತಾರೆ. ನಂತರ ಚಾಸಾ.25 ಸೋಮೇಗೌಡ.ಪಿ.ಪಿ., ರವರು ಸಾಕ್ಷಿದಾರರ ಹೇಳಿಕೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪಡೆದು ತನಿಖೆಯನ್ನು ಪೂರ್ಣಗೊಳಿಸಿ, ನ್ಯಾಯಾಲಯಕ್ಕೆ ಆರೋಪಿಗಳ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**4.** ತನಿಖಾಧಿಕಾರಿಯು ಅಂತಿಮ ವರದಿಯನ್ನು ಸಲ್ಲಿಸಿದ ನಂತರ, ನ್ಯಾಯಾಲಯವು ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಮೇಲ್ಕಂಡ ಕಲಂಗಳ ಅಡಿಗಳಲ್ಲಿ ಸಂಜ್ಞಾನವನ್ನು ತೆಗೆದುಕೊಂಡಿರುತ್ತದೆ.

**5.** ಪ್ರಕರಣವು ವಿಚಾರಣ ಹಂತದಲ್ಲಿರುವಾಗ 1 ನೇ ಆರೋಪಿಯು ದಿನಾಂಕ 03.12.2022 ರಂದು ಮರಣ ಹೊಂದಿರುತ್ತಾರೆಂದು ಮೃತರ ಮರಣ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಆ ಕಾರಣ 1 ನೇ ಆರೋಪಿಯ ವಿರುದ್ಧ ಪ್ರಕರಣ ಕೈಬಿಡಲಾಗಿದೆ. ಆರೋಪಿಗಳು ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರ ಅನ್ವಯ, ಅವರಿಗೆ ಅಂತಿಮ ವರದಿಯ ಪ್ರತಿಯನ್ನು ನೀಡಲಾಗಿದೆ. ಆರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಿ, ನಂತರ ಭಾರತ ದಂಡ

ಸಂಹಿತೆ ಕಲಂ.279, 283 ಮತ್ತು 304(ಎ) ಹಾಗೂ ಮೋಟಾರು ವಾಹನಗಳ ಅಧಿನಿಯಮ ಕಲಂ.196 ಮತ್ತು 192(1) ರಡಿಗಳಲ್ಲಿ ಶಿಕ್ಷಿಸಬಹುದಾದ ಆರೋಪಣೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಲಾಯಿತು. ಆರೋಪಿಗಳು ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ಕೇಳಿಕೊಂಡಿರುತ್ತಾರೆ.

**6.** ಆರೋಪಿಗಳ ವಿರುದ್ಧ ಮಾಡಿರುವ ಆರೋಪಗಳನ್ನು ಸಾಭೀತುಪಡಿಸುವ ಉದ್ದೇಶದಿಂದ, ಮಾನ್ಯ ಅಭಿಯೋಜನೆಯು ತಮ್ಮ ಪರವಾಗಿ ಅಂತಿಮ ವರದಿಯಲ್ಲಿ ನಮೂದಿಸಿರುವ 25 ಸಾಕ್ಷಿಗಳ ಪೈಕಿ 6 ಸಾಕ್ಷಿಗಳನ್ನು ಫ್ರಾಸಾ.1 ರಿಂದ 9 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿ, ದಾಖಲೆಗಳನ್ನು ಮತ್ತು ಸಹಿಗಳನ್ನು ನಿಪಿ.1 ರಿಂದ 29 ರಂತೆ ಗುರುತಿಸಿಕೊಂಡು, ತಮ್ಮ ಪರ ಸಾಕ್ಷಿಗಳ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತದೆ. ನಂತರ ಮಾನ್ಯ ಅಭಿಯೋಜನೆಯ ಪರ ಸಾಕ್ಷ್ಯದಲ್ಲಿ, ಆರೋಪಿಗಳ ವಿರುದ್ಧವಾದ ಸನ್ನಿವೇಶಗಳನ್ನು ಅವರಿಗೆ ಓದಿ ಹೇಳಿ, ಅವರು ನೀಡಿದ ಉತ್ತರಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿ ವಿಚಾರಣಾ ಕಾಲಕ್ಕೆ ನಮೂದಿಸಿಕೊಂಡಿರುತ್ತದೆ. ಆರೋಪಿಗಳು ತಮ್ಮ ಪರ ಯಾವುದೇ ಮೌಖಿಕ ಅಥವಾ ದಾಖಲೆಗಳ ಸಾಕ್ಷ್ಯವಿಲ್ಲವೆಂದು ನುಡಿದ ಕಾರಣ, ಅವರ ಪರ ಪ್ರತಿರಕ್ಷಾ ಸಾಕ್ಷ್ಯ ಇಲ್ಲವೆಂದು ಪರಿಗಣಿಸಿ, ವಾದ-ವಿವಾದಗಳಿಗೆ ಪ್ರಕರಣವನ್ನು ಕಾಯ್ದಿರಿಸಲಾಗಿದೆ.

**7.** ಉಭಯ ಪಕ್ಷಗಾರರ ವಕೀಲರುಗಳ ವಾದ-ವಿವಾದಗಳನ್ನು ಆಲಿಸಿ ಮತ್ತು ಸಾಕ್ಷ್ಯಾಧಾರಗಳನ್ನು ಗಮನದಲ್ಲಿರಿಸಿಕೊಂಡು ಅವಲೋಕಿಸಿದಾಗ, ಈ ಪ್ರಕರಣದಲ್ಲಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಅಂಶಗಳು ಈ ಕೆಳಕಂಡಂತಿವೆ.

**ಅಂಶಗಳು**

**1.** ದಿನಾಂಕ 02.07.2022 ರಂದು ರಾತ್ರಿ ಸುಮಾರು 9.30 ರ ಸಮಯದಲ್ಲಿ ಮೂಡಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಬಿದರಹಳ್ಳಿ ಗ್ರಾಮದ ಕೆ.ಎಸ್.ಆರ್.ಟಿ.ಸಿ ಡಿಪೋದ ಹತ್ತಿರ, ಎನ್.ಹೆಚ್-73 ಟಾರು ರಸ್ತೆಯ ಮೇಲೆ, ಕೊಟ್ಟಿಗೆಹಾರ ಕಡೆಯಿಂದ ಮೂಡಿಗೆರೆ ಕಡೆಗೆ ಬರುವಂತೆ ರಸ್ತೆಯ ಎಡಭಾಗದಲ್ಲಿ, 2 ನೇ ಆರೋಪಿಯು 3 ನೇ ಆರೋಪಿಗೆ ಸೇರಿದ ವಾಹನ ನೊಂದಣಿ ಸಂಖ್ಯೆ ಕೆಎ-18-ಟಿಬಿ-2393 ನೇ ಜಾನ್ ಧೀರೇ ಟ್ರಾಕ್ಟರ್ ಮತ್ತು ಮರದ ತುಂಡುಗಳನ್ನು ನೋಂದಣಿ ಸಂಖ್ಯಾ ಫಲಕವಿಲ್ಲದ ಟ್ರೇಲರ್ಗೆ ತುಂಬಿಸಿ, ಟ್ರೇಲರ್ ಪಂಚರ್ ಆಗಿದ್ದರಿಂದ ಯಾವುದೇ ಮುಂಜಾಗ್ರತೆ ಮತ್ತು ಎಚ್ಚರಿಕೆಯ ಸೂಚನಾ ಕ್ರಮಗಳನ್ನು ಕೈಗೊಳ್ಳದೇ ಅಪಾಯಕಾರಿಯಾಗಿ ಸಾರ್ವಜನಿಕ ರಸ್ತೆಗೆ ತೊಂದರೆಯಾಗುವ ರೀತಿಯಲ್ಲಿ ಸಾರ್ವಜನಿಕ ರಸ್ತೆಯಲ್ಲಿ ನಿಲ್ಲಿಸಿದ್ದು, ಆ ಮೂಲಕ 2 ನೇ ಆರೋಪಿ ಭಾ.ದಂ.ಸಂ.ಕಲಂ.283 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 2 ನೇ ಆರೋಪಿಯು ಸದರಿ ವಾಹನವನ್ನು ನಿರ್ಲಕ್ಷತನದಿಂದ ನಿಲ್ಲಿಸಿದ್ದಾಗ, ಮೃತ 1 ನೇ ಆರೋಪಿ ತನ್ನ ವಾಹನ ನೋಂದಣಿ ಸಂಖ್ಯೆ ಕೆಎ-18-ಇಜಿ-2544 ನೇ ಹೋಂಡಾ ಶೈನ್ ಬೈಕ್ ಅನ್ನು ಚಾಲನೆ ಮಾಡಿಕೊಂಡು ಬಂದುಕ ಸದರಿ ಟ್ರೇಲರ್ಗೆ ಡಿಕ್ಕಿಪಡಿಸಿದ ಪರಿಣಾಮ ಅಪಘಾತವಾಗಿದ್ದು, ಸದರಿ ಅಪಘಾತದಿಂದಾದ ಗಾಯಗಳಿಂದಾಗಿ 1 ನೇ ಆರೋಪಿಯು ಮೃತಪಟ್ಟಿದ್ದು, ಆ ಮೂಲಕ 2 ನೇ ಆರೋಪಿಯು

ಭಾ.ದಂ.ಸಂ.ಕಲಂ.304(ಎ)ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 2 ನೇ ಆರೋಪಿಯು 3 ನೇ ಆರೋಪಿಗೆ ಸೇರಿದ ವಿಮೆ ಇಲ್ಲದೇ ಇರುವ ವಾಹನವನ್ನು ಚಾಲನೆ ಮಾಡಿಕೊಂಡು ಬಂದಿದ್ದು ಹಾಗೂ 3 ನೇ ಆರೋಪಿ ವಿಮೆ ಇಲ್ಲದ ತನ್ನ ವಾಹನವನ್ನು ಚಾಲನೆ ಮಾಡಲು 2 ನೇ ಆರೋಪಿಗೆ ಅನುಮತಿಸಿದ್ದು, ಆ ಮೂಲಕ 2 ಮತ್ತು 3 ನೇ ಆರೋಪಿತರು ಮೋಟಾರು ವಾಹನಗಳ ಅಧಿನಿಯಮ ಕಲಂ.196 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 2 ನೇ ಆರೋಪಿಯು 3 ನೇ ಆರೋಪಿಗೆ ಸೇರಿದ ನೋಂದಣಿ ಮಾಡಿಸದೇ ಇರುವ ವಾಹನವನ್ನು ಚಾಲನೆ ಮಾಡಿಕೊಂಡು ಬಂದಿದ್ದು ಹಾಗೂ 3 ನೇ ಆರೋಪಿ ನೋಂದಣಿ ಮಾಡಿಸದ ತನ್ನ ವಾಹನವನ್ನು ಚಾಲನೆ ಮಾಡಲು 2 ನೇ ಆರೋಪಿಗೆ ಅನುಮತಿಸಿದ್ದು, ಆ ಮೂಲಕ 2 ಮತ್ತು 3 ನೇ ಆರೋಪಿತರು ಮೋಟಾರು ವಾಹನಗಳ ಅಧಿನಿಯಮ ಕಲಂ.192(1) ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**5.** ಯಾವ ಆದೇಶ ?

**8.** ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಗಳು

ಅಂಶ-1 ರಿಂದ 4 : **"ನಕಾರಾತ್ಮಕವಾಗಿ"**

ಅಂಶ-5 : ಅಂತಿಮ ಆದೇಶದಂತೆ

ಈ ಕೆಳಕಂಡ,

**-: ಕಾ ರ ಣ ಗ ಳು :-**

**ಅಂಶ-1 ರಿಂದ 4 :-**

**9.** ಈ ಎಲ್ಲ ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ, ಸಾಕ್ಷ್ಯದ ವಿಮರ್ಶೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಚರ್ಚಿಸಲು ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

**10.** ಮಾನ್ಯ ಅಭಿಯೋಜನೆಯು ತಮ್ಮ ಆರೋಪಣೆಯನ್ನು ಸಾಭೀತುಪಡಿಸಲು, ಈ ದೂರುದಾರರಾದ ಚಾಸಾ.1 ರಾಮು.ಎಲ್.ಎ ರವರನ್ನು ಫ್ರಾಸಾ.1 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, 01.07.2022 ರಂದು ಮ.2.30 ರ ಸಮಯಕ್ಕೆ ತನ್ನ ಮಗ ತಮ್ಮ ಮನೆಯಿಂದ ತನ್ನ ಹೋಂಡಾ ಸಿಟಿ ಬೈಕ್ ಸಂ.KA-18-EG-2544 ರಲ್ಲಿ ಬೆಳ್ತಂಗಡಿಗೆ ಹೋಗಿಬರುತ್ತೇನೆ ಎಂದು ಹೇಳಿ ಹೋದರು. ಆ ದಿನ ಸಂಜೆ ತನ್ನ ಮಗ ತನಗೆ ಕರೆ ಮಾಡಿ ತಾನು ಈ ದಿನ ಮನೆಗೆ ಬರುವುದಿಲ್ಲ ಎಂದು ಹಾಗೂ ತನ್ನ ಸ್ನೇಹಿತನ ಮನೆಯಲ್ಲಿ ಉಳಿದುಕೊಳ್ಳುತ್ತೇನೆ ಎಂದು ಹೇಳಿದರು. ದಿ.02.07.2022 ರಂದು ಸಂಜೆ ಚಾಸಾ-9 ರವರು ತನಗೆ ಫೋನ್ ಮಾಡಿ ತನ್ನ ಮಗನಿಗೆ ಮೂಡಿಗೆರೆ ಬಿದರಹಳ್ಳಿ ಬಸ್ ಡಿಪೋ ಬಳಿ ಅಪಘಾತವಾಗಿದೆ ಎಂದು ತಿಳಿಸಿದರು. ಆಗ ತಾನು ತಮ್ಮ ಪಕ್ಕದ ಮನೆಯವರಾದ ಚಾಸಾ-2 ಮತ್ತು 13 ರವರೊಂದಿಗೆ ಕಾರಿನಲ್ಲಿ ಅಪಘಾತ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ತನ್ನ

ಮಗನ ಬೈಕ್ ರಸ್ತೆಯ ಕೆಳಭಾಗಕ್ಕೆ ಬಿದ್ದಿತ್ತು. ಅಲ್ಲೇ ಮರತುಂಬಿದ್ದ ಒಂದು ಟ್ರೈಲರ್ ಇತ್ತು. ಆ ಟ್ರೈಲರ್ ಗೆ ಹೊಂದಿಕೊಂಡಿದ್ದ ಟ್ರ್ಯಾಕ್ಟರ್ ಯಾವುದೇ ಸೂಚನೆ ನೀಡದ ರಸ್ತೆಯಲ್ಲಿ ಹೋಗುತ್ತಿದ್ದ ಕಾರಣ ಅತಿಯಾದ ಮಳೆಗೆ ಮಂಜು ಕವಿದು ತನ್ನ ಮಗನಿಗೆ ಟ್ರ್ಯಾಕ್ಟರ್ ಕಾಣದೇ ಡಿಕ್ಕಿ ಪಡಿಸಿರುವುದಾಗಿ ಅಲ್ಲಿದ ಸ್ಥಳೀಯರು ತಿಳಿಸಿದರು. ತನ್ನ ಮಗ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಅವರನ್ನು ಸ್ಥಳೀಯರು ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಆ ದಿನ ರಾ.11.45 ರ ಸಮಯಕ್ಕೆ ಮೂಡಿಗೆರೆ ಪೋಲಿಸ್ ಠಾಣೆಗೆ ಹೋಗಿ ದೂರು ದಾಖಲಿಸಿದ್ದೇನೆ.

**11.** ಮುಂದುವರೆದು, ನಂತರ ಆಸ್ಪತ್ರೆಯಲ್ಲಿ ತನ್ನ ಮಗನ ಶವಪಂಚನಾಮೆ ಮಾಡಿದ್ದು, ಆಗ ಚಾಸಾ-3 ಮತ್ತು 4 ರವರು ಇದ್ದರು. ಆನಂತರ ಪೋಲಿಸರು ಅಪಘಾತ ಸ್ಥಳದ ಮಹಜರ್ ಮಾಡಿದ್ದು, ಸ್ಥಳವನ್ನು ತಾನೇ ತೋರಿಸಿದ್ದೇನೆ. ಆನಂತರ ತನ್ನ ಮಗನ ವಾಹನವನ್ನು ಠಾಣೆಯಿಂದ ಬಿಡಿಸಿಕೊಂಡು ಬಂದಿದ್ದೇನೆ. ಸಾಕ್ಷಿಯು ದಿ.02.07.2022 ರ ದೂರು, ಪ್ರ.ವ.ವರದಿ, ಶವಪಂಚನಾಮೆ, ಸ್ಥಳ ಮಹಜರ್ ನಲ್ಲಿ ತಮ್ಮ ಸಹಿಗಳನ್ನು ಗುರುತಿಸಿ, ಒಂದು ಪೋಟೋವನ್ನು ನೋಡಿ ಸ್ಥಳ ಮಹಜರ್ ಕಾಲಕ್ಕೆ ತೆಗೆದಿದ್ದಾರೆ ಎಂದು ಗುರುತಿಸುತ್ತಾರೆ. ದಾಖಲೆಗಳನ್ನು ಕ್ರಮವಾಗಿ ನಿಪಿ-1 ರಿಂದ 4, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 4(ಎ), ಪೋಟೋವನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ನಿಪಿ-5 ರಿಂದ 7 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ದಿ.14.12.2022 ರ ಇಂಡೆಮಿನಿಟಿ ಬಾಂಡ್ ಮತ್ತು ಎರಡು ಪೋಟೋಗಳನ್ನು ನೋಡಿ ವಾಹನ ಬಿಡುಗಡೆ ಕಾಲಕ್ಕೆ ತೆಗೆದ ಬಗ್ಗೆ ಗುರುತಿಸುತ್ತಾರೆ. ಸದರಿ ದಾಖಲೆಗಳನ್ನು ನಿಪಿ-8 ರಿಂದ 10, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಿ ಭಾಗಶಃ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

**12.** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ.1 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿದರು ಸಹಿತ, ತಮ್ಮ ವಾದವನ್ನು ಪುಷ್ಠೀಕರಿಸುವಂತಹ ಹೇಳಿಕೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ.

**13.** ಆರೋಪಿಗಳ ಪರ ವಕೀಲರು ಫ್ರಾಸಾ.1 ರವರನ್ನು ಪಾಟೀ ಸವಾಲು ಮಾಡಿರುತ್ತಾರೆ. ಫ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ ತನ್ನ ಮಗ ಕಟ್ಟಡ ಕಾಮಗಾರಿ ಕೆಲಸ ಮಾಡುತ್ತಿದ್ದರು. ದಿ.01.07.2022 ರಂದು ತನ್ನ ಮಗ ತನ್ನ ಮನೆಯಿಂದ ಬೆಳ್ತಂಗಡಿಗೆ ಹೋಗಿದ್ದರು. ತನ್ನ ಮನೆಯಿಂದ ಬೆಳ್ತಂಗಡಿಗೆ ಎಷ್ಟು ಕಿ.ಮೀ. ದೂರ ಇದೆ ಎಂದು ತನಗೆ ಗೊತ್ತಿಲ್ಲ. ತನಗೆ ಸಹಿ ಮಾಡುವುದನ್ನು ಹೊರತುಪಡಿಸಿ ಕನ್ನಡ ಭಾಷೆ ಓದಲು ಬರೆಯಲು ಬರುವುದಿಲ್ಲ. ತನ್ನ ಸ್ನೇಹಿತನ ಮನೆಗೆ ಹೋಗಿಬರುತ್ತೇನೆ ಎಂದು ತನ್ನ ಮಗ ಹೇಳಿದ್ದರು. ಗೋಣೀಬೀಡಿನಿಂದ ಮೂಡಿಗೆರೆ, ಬಣಕಲ್ ಮತ್ತು ಚಾರ್ಮುಡಿ ಮಾರ್ಗವಾಗಿ 60 ಕಿ.ಮೀ. ದೂರದಲ್ಲಿ ಬೆಳ್ತಂಗಡಿ ಇದೆ ಎಂದರೆ ಸರಿ. ಜುಲೈ ತಿಂಗಳಲ್ಲಿ ಗೋಣೀಬೀಡು ಹಾಗೂ ಚಾರ್ಮುಡಿ ಘಾಟಿಯಲ್ಲಿ ದಾರಕಾರ ಮಳೆಯಾಗುತ್ತದೆ ಎಂದರೆ ಸರಿ. ಆ ಸಮಯಕ್ಕೆ ಚಾರ್ಮುಡಿ ಘಾಟಿಯಲ್ಲಿ ಸುಮಾರು 5 ಅಡಿ ದೂರಕ್ಕೂ ರಸ್ತೆ ಕಾಣದ ಹಾಗೇ ಮಂಜು ಇರುತ್ತದೆ ಎಂದರೆ ಸರಿ. ತನ್ನ ಮಗ ಬೆಳ್ತಂಗಡಿಯಿಂದ ಯಾವ ಸಮಯಕ್ಕೆ ವಾಪಸ್ಸು ಹೊರಟಿದ್ದರು ಎಂದು ತನಗೆ ಗೊತ್ತಿಲ್ಲ.

**14.** ಮುಂದುವರೆದು ಪಾಟೀಸವಾಲಿನಲ್ಲಿ, ರಾ.9.30 ಕ್ಕೆ ನಾನು ಹೇಳಿದ ಸ್ಥಳದಲ್ಲಿ ಅಪಘಾತವಾಗಿದ್ದರೆ ತನ್ನ ಮಗ ಸ.4.00 ಗಂಟೆಯಷ್ಟರಲ್ಲಿ ಬೆಳ್ತಂಗಡಿಯಿಂದ ಹೊರಟಿರಬಹುದು ಎಂದರೆ ಸರಿ. ಸ.4.00 ಗಂಟೆಗೆ ಬೆಳ್ತಂಗಡಿಯಿಂದ ಹೊರಟರೆ

ಗೋಣೀಬೀಡಿಗೆ ಬರಲು ಸ.6.00 ಗಂಟೆ ಸಾಕು ಎಂದರೆ ಸಾಕ್ಷಿಯು ಅವರು ಧರ್ಮಸ್ಥಳಕ್ಕೆ ಹೋಗಿ ಬಂದಿದ್ದರು ಎಂದು ನುಡಿಯುತ್ತಾರೆ. ತನ್ನ ಮಗನ ಬಳಿ ದ್ವಿಚಕ್ರ ವಾಹನ ಚಾಲನ ಪರವಾನಗೆ ಇತ್ತು. ಅದನ್ನು ತಾನು ಪೋಲಿಸರಗೆ ಹಾಜರುಪಡಿಸಿದ್ದೆ. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸುವುದಾಗಿ ಪೋಲಿಸರು ಹೇಳಿದ್ದರು ಎಂದರೆ ಇರಬಹುದು. ಈ ದಿನ ತನ್ನ ಮಗನ ಚಾಲನ ಪರವಾನಗೆಯನ್ನು ತಾನು ನೋಡಿಲ್ಲ ಎಂದರೆ ಸರಿಯಲ್ಲ. ತಾನು ತನ್ನ ಮಗನ ವಾಹನವನ್ನು ಪೋಲಿಸರಿಂದ ವಾಪಸ್ಸು ಪಡೆದಿದ್ದೇನೆ. ನಿಪಿ-3 ರಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿಲ್ಲ. ಅದನ್ನು ಪೋಲಿಸರು ತನಗೆ ಓದಿ ಹೇಳಿಲ್ಲ. ನಿಪಿ-3 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೆ. ತನ್ನ ಮಗನ ಅಜಾಗರೂಕತೆಯ ಚಾಲನೆಯಿಂದಲೇ ಅಪಘಾತವಾಗಿದೆ ಎಂದು ನಿಪಿ-3 ರಲ್ಲಿ ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

**15.** ಮುಂದುವರೆದು ಪಾಟೀಸವಾಲಿನಲ್ಲಿ, ನಿಪಿ-1 ನ್ನು ಯಾರು ಬರೆದಿದ್ದರು ಎಂದು ತನಗೆ ಗೊತ್ತಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿಲ್ಲ. ತನ್ನ ಮಗ ಹೆಲ್ಮೇಟ್ ಧರಿಸಿ ವಾಹನ ಚಾಲನೆ ಮಾಡುತ್ತಿದ್ದರು ಎಂದು ತನ್ನ ದೂರಿನಲ್ಲಿ ಬರೆಸಿದ್ದೆ. ಹೆಲ್ಮೇಟ್ ನ್ನು ತಾನು ವಾಪಸ್ಸು ಪಡೆದಿಲ್ಲ. ಸ್ಥಳದಲ್ಲಿ ಆ ಹೆಲ್ಮೇಟ್ ನೊಂದಿಗೆ ತನ್ನನ್ನು ನಿಲ್ಲಿಸಿ ಪೋಟೋವನ್ನು ತೆಗೆಸಿಲ್ಲ. ನಿಪಿ-4 ರಲ್ಲಿ ಕಾಣುವ ನಕಾಶೆಯನ್ನು ತನ್ನ ಮುಂದೆ ಬರೆದಿಲ್ಲ. ಅದನ್ನು ಯಾವ ಸ್ಥಳದಲ್ಲಿ ಬರೆಯಲಾಯಿತು ಎಂದು ತನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿಲ್ಲ. ತನ್ನ ಮಗ ತೀರಿಕೊಂಡ ಆಗಾತದಲ್ಲಿ ಇದ್ದ ತಾನು ಪೋಲಿಸರು ಹೇಳಿದ ಕಡೆ ಸಹಿ ಮಾಡಿದ್ದೇನೆ ಎಂದರೆ ಸರಿ. ಮಹಜರ್ ಕಾಲಕ್ಕೆ ತಾನು ಅಪಘಾತ ಸ್ಥಳಕ್ಕೆ ಬೇಟಿ ನೀಡಿದ್ದೆ. ಆ ರೀತಿ ದಿ.04.07.2022 ರಂದು ಸ್ಥಳಕ್ಕೆ ಬೇಟಿ ನೀಡಿದ್ದೆ. ಆ ಸ್ಥಳದಲ್ಲಿ ತನ್ನ ಮಗ ಧರಿಸಿದ್ದ ಹೆಲ್ಮೇಟ್‌ನ್ನು ಪೋಲಿಸರು ವಶಕ್ಕೆ ಪಡೆಯಲಿಲ್ಲ.

ಅಪಘಾತ ಸಮಯಕ್ಕೆ ತನ್ನ ಮಗ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದರು ಎಂದರೆ ಸರಿ.

**16.** ಮುಂದುವರೆದು ಪಾಟೀಸವಾಲಿನಲ್ಲಿ, ತಾನು ಹೇಳಿದ ಟ್ರೈಲರ್ ರಸ್ತೆಯ ಮೇಲೆ ಎಡಭಾಗದಲ್ಲಿ ಇತ್ತು. ಅದರ ಟೈಯರ್ ಪಂಚರ್ ಆಗಿತ್ತು. ಮೇಲೆ ಹೇಳಿದ ಮಹಜರ್ ಬರೆಯುವ ಕಾಲಕ್ಕೆ ಸದರಿ ವಾಹನಗಳನ್ನು ಪೋಲಿಸರು ವಶಕ್ಕೆ ಪಡೆದಿದ್ದರು ಎಂದರೆ ಸರಿ. ಮಹಜರ್ ಬರೆದ ಸ್ಥಳದ ಚೆಕ್ಕುಬಂದಿ ಹೇಳಲು ಆಗುವುದಿಲ್ಲ. ಸದರಿ ಸ್ಥಳದ ಮುಂಭಾಗಕ್ಕೆ KSRTC ಬಸ್ ಡಿಪೋ ಇದೆ ಎಂದರೆ ಸರಿ. ಆ ಡಿಪೋನ ಎದುರು ಬೆಳಕಿನ ವ್ಯವಸ್ಥೆ ಇದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಅಪಘಾತವಾದ ದಿನ ತುಂಬಾ ಮಳೆ ಇತ್ತು ಎಂದು ನುಡಿಯುತ್ತಾರೆ. ಟ್ರೈಲರ್ ನಿಂತಿದ್ದ ಸ್ಥಳದ ಎರಡೂ ಬದಿಯಲ್ಲಿ ಬೀದಿ ದೀಪಗಳು ಇವೆ ಎಂದು ಮಹಜರ್ ನಲ್ಲಿ ಬರೆಯಲಾಗಿದೆ ಎಂದರೆ ಸರಿ. ಬಸ್ ಡಿಪೋನ ಎದುರು ರಸ್ತೆ ನೇರವಾಗಿದೆ ಎಂದರೆ ಸಾಕ್ಷಿಯು ಸ್ವಲ್ಪ ಕ್ರಾಸ್ ಇದೆ ಎಂದು ನುಡಿಯುತ್ತಾರೆ. ನಿಪಿ-4 ರಲ್ಲಿ ಬರೆದಿರುವ ನಕ್ಷೆ ಸರಿ ಇದೆಯಾ ಎಂದು ತನಗೆ ಗೊತ್ತಿಲ್ಲ. ಪೋಲಿಸರು ಠಾಣೆಯಲ್ಲಿ 4-5 ದಾಖಲೆಗಳಿಗೆ ತನ್ನ ಸಹಿ ಪಡೆದಿದ್ದಾರೆ ಎಂದರೆ ಸರಿ. ನಿಪಿ-3 ಮತ್ತು 4 ಕ್ಕೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದರೆ ಸರಿ.

**17.** ಮುಂದುವರೆದು ಪಾಟೀಸವಾಲಿನಲ್ಲಿ, ಅಪಘಾತ ಸ್ಥಳದಲ್ಲಿ ಇದ್ದ ರಸ್ತೆ 25 ಅಡಿ ಅಗಲ ಇದೆ ಎಂದರೆ ಸರಿ. ಬಣಕಲ್ ನಿಂದ ಮೂಡಿಗೆರೆಗೆ ಬರಲು ತಾನು ಹೇಳಿದ ಟ್ರೈಲರ್ ನಿಂತಿದ್ದ ಬಲಭಾಗದ ಕಡೆ ಸಂಚರಿಸಬೇಕಿತ್ತು ಎಂದರೆ ಸರಿ. ತಾನು ವಿಮಾ ಪರಿಹಾರ ಕೋರಿ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ. ತನ್ನ ಮಗ ತನ್ನ ಬೈಕ್ ನ್ನು ಅತೀವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಆ ದಿನ ತನ್ನ ಮಗ ಮದ್ಯಪಾನ ಮಾಡಿ ವಾಹನ ಚಾಲನೆ

ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆ ಕಾರಣ ಅವರೇ ಟ್ರೈಲರ್ ಗೆ ಡಿಕ್ಕಿ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ತಾನು ಹೇಳಿದ ಅಪಘಾತಕ್ಕೂ ಆರೋಪಿತರಿಗೆ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ತಾನು ಹೇಳಿದಂತೆ ಅಪಘಾತ ಸ್ಥಳದಲ್ಲಿ ಟ್ರೈಲರ್ ಮತ್ತು ಅದರ 20 ಅಡಿ ದೂರದಲ್ಲಿ ಟ್ರ್ಯಾಕ್ಟರ್ ಇಂಜಿನ್ ನಿಲ್ಲಿಸಿದ್ದರು ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಇಂಜಿನ್ ನ ನೋಂದಣಿ ಸಂಖ್ಯೆಯನ್ನು ದೂರಿನಲ್ಲಿ ಬರೆಸಿದ್ದೇನೆ. ಸದರಿ ಟ್ರೈಲರ್ ನ ಅಕ್ಕಪಕ್ಕ ಸೂಚನಾ ಫಲಕ ಇಟ್ಟಿರಲಿಲ್ಲ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಪ್ರಕರಣಕ್ಕೋಸ್ಕರ ತಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಾನು ಅಪಘಾತ ಸ್ಥಳವನ್ನು ಇಂದಿಗೂ ಸಹಾ ನೋಡಿಲ್ಲ ಎಂದರೆ ಸರಿಯಲ್ಲ. ತನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

**18.** ಮತ್ತೊಬ್ಬ ಪ್ರತ್ಯಕ್ಷ ಸಾಕ್ಷಿಯಾದ ಚಾಸಾ.2 ಕುಮಾರ್ ರವರನ್ನು ಫ್ರಾಸಾ.2 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ತನಗಿಲ್ಲ. ಚಾಸಾ-1 ತನ್ನ ಮನೆಯ ಪಕ್ಕದ ವಾಸಿ. ಮೃತ ರಕ್ಷಿತ್ ಚಾಸಾ-1 ರವರ ಮಗ. ಸಾಕ್ಷಿಯು ನಿಪಿ-3 ರ ಶವಪಂಚನಾಮೆಯಲ್ಲಿ ತಮ್ಮ ಸಹಿಯನ್ನು ಗುರುತಿಸುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ದಿ.02.07.2022 ರಂದು ಮೃತ ರಕ್ಷಿತ್ ರವರಿಗೆ ಬಿದರಹಳ್ಳಿಯ KSRTC ಡಿಪೋ ಬಳಿ ಅಪಘತಾವಾಗಿದ್ದ ಸಂಬಂಧ ದಿ.04.07.2022 ರಂದು ತನ್ನನ್ನು ಸದರಿ ಸ್ಥಳಕ್ಕೆ ಮಹಜರ್ ಗೆಂದು ಕರೆದುಕೊಂಡು ಹೋಗಿ ನಂತರ ಪೋಲಿಸ್ ಠಾಣೆಗೆ ಕರೆದುಕೊಂಡು ಬಂದು ನಿಪಿ-3 ಕ್ಕೆ ಸಹಿ ಪಡೆದಿರುತ್ತಾರೆ. ಟಿಂಬರ್ ತುಂಬಿದ ಟ್ರ್ಯಾಲಿಯು ಯಾವುದೇ ಸೂಚನೆ ಇಲ್ಲದೇ ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿದ್ದಾಗ

ಕೊಟ್ಟಿಗೆಹಾರದಿಂದ KA-18-EG-2544 ಹೊಂಡಾ ಶೈನ್ ಬೈಕ್ ನಲ್ಲಿ ಬರುತ್ತಿದ್ದ ರಕ್ಷಿತ್ ಆ ಟ್ರ್ಯಾಲಿಗೆ ಗುದ್ದಿಸಿ ಅಪಘಾತವಾಗಿರುತ್ತದೆ. ಈ ವಿಚಾರವನ್ನು ತಮ್ಮ ಊರಿನ ಮದನ್ ರವರು ರಾತ್ರಿ 9.45 ರ ಸಮಯಕ್ಕೆ ತನಗೆ ಫೋನ್ ಮಾಡಿ ತಿಳಿಸಿದ್ದರು. ನಂತರ ತಾನು ಪದ್ಮೇಗೌಡ ಎನ್ನುವವರೊಂದಿಗೆ ಚಾಸಾ-1 ರವರ ಮನೆಗೆ ಹೋಗಿ ಅವರನ್ನು ಕರೆದುಕೊಂಡು ಅಪಘಾತ ಸ್ಥಳಕ್ಕೆ ಹೋಗಿದ್ದೆವು. ಸ್ಥಳದಲ್ಲಿ ಟ್ರ್ಯಾಲಿಯ ಹಿಂಭಾಗದಲ್ಲಿ ಬೈಕ್ ಬಿದ್ದಿತ್ತು. ಟ್ರ್ಯಾಲಿಯ ಮೇಲೆ ಯಾವುದೇ ನೋಂದಣಿ ಸಂಖ್ಯೆ ಇರಲಿಲ್ಲ.

**19.** ಮುಂದುವರೆದು, ನಂತರ ತಾವು ಮೂಡಿಗೆರೆ ಎಂ.ಜಿ.ಎಂ. ಆಸ್ಪತ್ರೆಗೆ ಬಂದು ಅಲ್ಲಿ ಶವಗಾರದಲ್ಲಿ ಇದ್ದ ರಕ್ಷಿತ್ ರವರ ಮೃತ ದೇಹವನ್ನು ಗುರುತಿಸಿ ನಂತರ ಮೂಡಿಗೆರೆ ಪೋಲಿಸ್ ಠಾಣೆಗೆ ಹೋಗಿ ಚಾಸ-1 ರವರ ಮೂಲಕ ದೂರು ದಾಖಲಿಸಿದೆವು. ಮರುದಿನ ಸ್ಥಳಕ್ಕೆ ಹೋಗಿ ನೋಡಿದಾಗ ಅಪಘಾತ ಸ್ಥಳದ 50-60 ಅಡಿ ಮುಂದೆ ಒಂದು ಟ್ರ್ಯಾಕ್ಟರ್ ಇಂಜಿನ್ ನಿಂತಿದ್ದು ಅದರ ನೋಂದಣಿ ಸಂಖ್ಯೆ KA-18-TB-2393 ಆಗಿತ್ತು. ಮರುದಿನ ಪೋಲಿಸರು ಸ್ಥಳ ಮಹಜರ್ ಗೆಂದು ಚಾಸಾ-1 ರವರನ್ನು ಕರೆದಿದ್ದು ತಾನು ಅವರೊಂದಿಗೆ ಹೊಗಿದ್ದೆ. ನಂತರ ಪೋಲಿಸ್ ಠಾಣೆಯ ಬಳಿ ಕರೆದುಕೊಂಡು ಬಂದು ಟ್ರ್ಯಾಕ್ಟರ್ ಮತ್ತು ಬೈಕ್ ನ ಮುಂದೆ ಪೋಟೋ ತೆಗೆದು ಬೈಕನ್ನು ಪೋಲಿಸರು ವಶಕ್ಕೆ ಪಡೆದರು. ಯಾವುದೇ ಸೂಚನೆ ಫಲಕ ಹಾಕದೇ ಟ್ರ್ಯಾಕ್ಟರ್ ಮತ್ತು ಟ್ರ್ಯಾಲಿಯನ್ನು ರಸ್ತೆಯಲ್ಲಿ ನಿಲ್ಲಿಸಿದ್ದ ಕಾರಣ ಅಪಘಾತವಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ವನ್ನು ಪುಷ್ಠೀಕರಿಸುವಂತಹ ಹೇಳಿಕೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ.

**20.** ಆರೋಪಿಗಳ ಪರ ವಕೀಲರು ಫ್ರಾಸಾ.2 ರವರನ್ನು ಪಾಟೀ ಸವಾಲು

ಮಾಡಿರುತ್ತಾರೆ. ಪ್ರಾಸಾ.2 ರವರು ತಮ್ಮ ಪಾಟೀ ಸವಾಲಿನಲ್ಲಿ ಪೋಲಿಸರು ಘಟನಾ ಸ್ಥಳದಲ್ಲಿ ನನ್ನನ್ನು ನಿಲ್ಲಿಸಿ ಪೋಟೋ ತೆಗೆದಿದ್ದರು. ನಿಪಿ-5 ರಲ್ಲಿ ತಾನು ಕಾಣುತ್ತಿಲ್ಲ ಎಂದರೆ ಸರಿ. ಬಿದರಹಳ್ಳಿ ಬಸ್ ಡಿಪೋ ಎದುರು ಇರುವ ರಸ್ತೆ 25-30 ಅಡಿ ಅಗಲ ಇದೆ ಎಂದರೆ ಸರಿ. ಸದರಿ ರಸ್ತೆ ನೇರವಾಗಿ ಇದೆ ಎಂದರೆ ಸರಿ. ತಾನು ಸ್ಥಳಕ್ಕೆ ಹೋಗಿ ನೋಡಿದಾಗ ವಾಹನಗಳು ರಸ್ತೆಯ ಎಡಭಾಗದಲ್ಲಿ ಇದ್ದವು. ಟ್ರ್ಯಾಲಿ ಇದ್ದ ರಸ್ತೆಯಲ್ಲಿ ಹಿಂಬದಿಯಿಂದ ಬರುವ ವಾಹನ ಟ್ರ್ಯಾಲಿಯ ಬಲಭಾಗಕ್ಕೆ ಸಂಚರಿಸಬಹುದಾದ ಸ್ಥಳವಕಾಶ ಇತ್ತು ಎಂದರೆ ಸರಿ. ಮೃತ ರಕ್ಷಿತ್ ತನ್ನ ಸಂಬಂಧಿಕರಲ್ಲ. ಅಪಘಾತವಾದ ದಿನ ಮಳೆ ಬರುತ್ತಿದ್ದು ಮಂಜು ಕವಿದಿತ್ತು ಎಂದರೆ ಸರಿ. ಮಳೆ ಮತ್ತು ಮಂಜು ಇರದಿದ್ದರೆ ಅಪಘಾತವಾಗುತ್ತಿರಲಿಲ್ಲ ಎಂದರೆ ಇರಬಹುದು. ನಿಪಿ-3 ಕ್ಕೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ಅದಕ್ಕೆ ತನನ್ನು ಹೊರತುಪಡಿಸಿ ಇನ್ನೆಷ್ಟು ಜನ ಸಹಿ ಮಾಡಿದ್ದಾರೆ ಎಂದು ತಾನು ನೋಡಿಲ್ಲ. ತಾನು ಸಹಿ ಮಾಡಿದ ದಾಖಲೆಯನ್ನು ಯಾರು ಬರೆದಿದ್ದರು ಹಾಗೂ ಎಷ್ಟು ಪುಟಗಳಲ್ಲಿ ಬರೆದಿದ್ದರು ಎಂದು ತನಗೆ ಗೊತ್ತಿಲ್ಲ.

**21.** ಮುಂದುವರೆದು ಪಾಟೀಸವಾಲಿನಲ್ಲಿ, ತಾನು ಹೇಳಿದಂತೆ ತನಗೆ ಯಾರೂ ಸಹಾ ಕರೆ ಮಾಡಿರಲಿಲ್ಲ ಹಾಗೂ ತಾನು ಸ್ದಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ತನಗೆ ಕರೆ ಬಂದಿದ್ದ ಮೊಬೈಲ್ ಸಂಖ್ಯೆ ನನಗೆ ನೆನಪಿಲ್ಲ. ತಾನು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ. ಸ್ಥಳದಲ್ಲಿ ನಿಂತಿದ್ದ ಟ್ರೈಲರ್ ನ ಬಲಭಾಗದ ಟೈಯರ್ ಪಂಚರ್ ಆಗಿತ್ತು. ಆ ಟ್ರೈಲರ್ ನಲ್ಲಿ ಟಿಂಬರ್ ಲೋಡ್ ಇದ್ದು ಟೈಯರ್ ಪಂಚರ್ ಆದ ಕಾರಣ ಅದನ್ನು ಚಲಾವಣೆ ಮಾಡಲು ಆಗಿರುವುದಿಲ್ಲ ಎಂದರೆ ಇರಬಹುದು. ಅಪಘಾತವನ್ನು ಕಣ್ಣಾರೆ ನೋಡಿದವರು ತನಗೆ ಮಾಹಿತಿ ಕೊಟ್ಟಿಲ್ಲ. ಅಪಘಾತವಾದ ದಿನ ಚಾಸಾ-1 ರವರನ್ನು ಪದ್ಮೇಗೌಡರವರ ಜೀಪ್ ನಲ್ಲಿ ಸ್ದಳಕ್ಕೆ ಕರೆದುಕೊಂಡು ಬಂದಿದ್ದೆವು. ಸದರಿ ಜೀಪ್ ನ ನೋಂದಣಿ ಸಂಖ್ಯೆ ತನಗೆ

ಹೇಳಲು ಆಗುವುದಿಲ್ಲ. ಬರವಣಿಗೆ ಆದ ಸಮಯಕ್ಕೆ ಪದ್ಮೇಗೌಡರವರು ಹಾಜರಿದ್ದರು. ಪೋಲಿಸರು ಪದ್ಮೇಗೌಡರವರ ಸಹಿ ಪಡೆದಿದ್ದಾರ ಎಂದು ತನಗೆ ಗೊತ್ತಿಲ್ಲ. ಮೃತರು ತನ್ನ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ತನಗೆ ವಿಚಾರ ತಿಳಿಯದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

**22.** ಇನ್ನೊಬ್ಬ ಪ್ರತ್ಯಕ್ಷ ಸಾಕ್ಷಿಯಾದ ಚಾಸಾ.9 ಮಧನ್ ರವರನ್ನು ಫ್ರಾಸಾ.3 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿತರ ಪರಿಚಯ ತನಗಿಲ್ಲ. ಚಾಸಾ-10 ತನ್ನ ಸ್ನೇಹಿತ. ಮೃತ ರಕ್ಷಿತ್ ರವರು ಸಹಾ ತನ್ನ ಸ್ನೇಹಿತ. ಚಾಸಾ-1 ರವರು ತಮ್ಮ ಊರುಮನೆಯವರು. ದಿನಾಂಕ 02.07.2022 ರಂದು ರಾ.9.30 ಕ್ಕೆ ತನಗೆ ಒಂದು ಪೋನ್ ಕಾಲ್ ಬಂದಿದ್ದು ರಕ್ಷಿತ್ ರವರ KA-18-EG-2393 ವಾಹನ ಬಿದರಹಳ್ಳಿಯಲ್ಲಿ ಟಿಂಬರ್ ತುಂಬಿದ ಟ್ರಾಕ್ಟರ್ ಟ್ರೈಲರ್ ಸಂ.KA-18-EG-2544 ಗೆ ಡಿಕ್ಕಿಯಾಗಿ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ. ನಂತರ ತಾನು ಚಾಸಾ-2 ರವರಿಗೆ ಕರೆ ಮಾಡಿ ಸದರಿ ವಿಚಾರವನ್ನು ತಿಳಿಸಿದ್ದೇನೆ. ನಂತರ ಚಾಸಾ-2 ರವರು ಚಾಸಾ-1 ಮತ್ತು 13 ರವರನ್ನು ಕರೆದುಕೊಂಡು ಬಿದರಹಳ್ಳಿಗೆ ಹೋಗಿ ನೋಡಿದ್ದು ಅಪಘಾತ ಸ್ಥಳದಲ್ಲಿ ರಕ್ಷಿತ್ ರವರು ಇರಲಿಲ್ಲ. ಆದರೆ ಸಾರ್ವಜನಿಕರು ರಕ್ಷಿತ್ ರವರು ಮೃತ ಪಟ್ಟಿದ್ದು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ತಿಳಿಸಿರುತ್ತಾರೆ. ತಾನು ರಾ.10.30 ರ ಸಮಯಕ್ಕೆ ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಿದಾಗ ಅಲ್ಲಿ ಚಾಸಾ-1 ರವರು ಮೃತ ರಕ್ಷಿತ್ ರವರ ಮೃತದೇಹವನ್ನು ನೋಡಿರುತ್ತಾರೆ. ಆನಂತರ ಚಾಸಾ-1 ರವರು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ. ದಿ.04.07.2022 ರಂದು

ಪೋಲಿಸರು ತನಗೆ ಕರೆ ಮಾಡಿ ಸ್ಥಳ ಮಹಜರ್ ಗೆ ಕರೆದಿದ್ದು ತಾನು, ಚಾಸಾ-10, 1 ಮತ್ತು 2 ರವರು ಅಪಘಾತ ಸ್ಥಳಕ್ಕೆ ಹೋಗಿದ್ದು ಅಲ್ಲಿ ಮ.2.30 ರಿಂದ 3.30 ರವರೆಗೂ ಸ್ಥಳಮಹಜರ್ ಬರೆದು ಪೋಟೋ ತೆಗೆದಿರುತ್ತಾರೆ. ಮಹಜರ್ ಕಾಲಕ್ಕೆ ಚಾಸಾ-1 ರವರು ಸ್ಥಳವನ್ನು ತೋರಿಸಿದ್ದಾರೆ. ಟಿಂಬರ್ ಲೋಡ್ ತುಂಬಿಸಿದ್ದ ಟ್ರ್ಯಾಕ್ಟರ್ ಮತ್ತು ಟ್ರೈಲರ್ ನ್ನು ನಿರ್ಲಕ್ಷ್ಯತನದಿಂದ ರಸ್ತೆಯಲ್ಲಿ ನಿಲ್ಲಿಸಿದ್ದ ಕಾರಣ ಅಪಘಾತವಾಗಿರುತ್ತದೆ. ಸಾಕ್ಷಿಯು ನಿಪಿ-4 ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-5 ರ ಪೋಟೋದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು ಎಂದು ಭಾಗಶಃ ಪ್ರತಿಕೂಲ ಸಾಕ್ಷವನ್ನು ನುಡಿದಿರುತ್ತಾರೆ.

**23.** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ.3 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿದರು ಸಹಿತ, ತಮ್ಮ ವಾದವನ್ನು ಪುಷ್ಠೀಕರಿಸುವಂತಹ ಹೇಳಿಕೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ.

**24.** ಆರೋಪಿಗಳ ಪರ ವಕೀಲರು ಫ್ರಾಸಾ.3 ರವರನ್ನು ಪಾಟೀ ಸವಾಲು ಮಾಡಿರುತ್ತಾರೆ. ಫ್ರಾಸಾ.3 ರವರು ತಮ್ಮ ಪಾಟೀ ಸವಾಲಿನಲ್ಲಿ ಮೃತ ರಕ್ಷಿತ್ ತನಗೆ ಕಳೆದ 6 ವರ್ಷಗಳಿಂದ ಪರಿಚಯ. ಚಾಸಾ-1 ಮತ್ತು 2 ರವರು ತಮ್ಮ ಊರಿನವರು. ಚಾಸಾ-2 ಮೃತ ರಕ್ಷಿತ್ ರವರ ಚಿಕ್ಕಪ್ಪ ಎಂದರೆ ಸರಿ. ಚಾಸಾ-1 ಮತ್ತು 2 ರವರ ಸಹೋದರರು ಎಂದರೆ ಸರಿ. ಯಾವ ಮೊಬೈಲ್ ಸಂಖ್ಯೆಯಿಂದ ಯಾರು ಕರೆ ಮಾಡಿದ್ದರು ಎಂದು ತನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. ಪೋಲಿಸ್ ಠಾಣೆಯಲ್ಲಿ ತಾನೇ ದೂರು ಕೊಟ್ಟಿದ್ದೆ. ಮಹಜರ್ ಬರೆಯುವ ಕಾಲಕ್ಕೆ ಚಾಸಾ-2 ರವರು ಸಹಾ ಹಾಜರಿದ್ದರು. ಮಹಜರ್ ಗೆ

ಸ್ಥಳದಲ್ಲಿಯೇ ತಾನು ಮತ್ತು ಚಾಸಾ-2 ರವರು ಸಹಿ ಮಾಡಿದ್ದೇವೆ ಎಂದರೆ ಸರಿ. ನಿಪಿ-4 ರಲ್ಲಿ ಚಾಸಾ-2 ರವರ ಸಹಿ ಇಲ್ಲ ಎಂದರೆ ಸಾಕ್ಷಿಯು ಅವರು ಸಹಿ ಮಾಡಿದ್ದರ ಇಲ್ಲವ ಎಂದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-4 ಕ್ಕೆ ಎಷ್ಟು ಜನ ಸಹಿ ಮಾಡಿದ್ದಾರೆ ಎಂದು ತನಗೆ ಗೊತ್ತಿಲ್ಲ. ತಾನು ಸಹಿ ಮಾಡಿದ ದಾಖಲೆ ಎಷ್ಟು ಪುಟಗಳಲ್ಲಿ ಇತ್ತು ಎಂದು ತನಗೆ ನೆನಪಿಲ್ಲ. ಸದರಿ ದಾಖಲೆಯ ವಿವರಗಳನ್ನು ಓದಿ ಹೇಳಿದ ನಂತರವೇ ಪೋಲಿಸರು ಹೇಳಿದ ಸ್ಥಳದಲ್ಲಿ ಸಹಿ ಮಾಡಿದ್ದೇನೆ. ಸ್ಥಳದಲ್ಲಿ ಸುಮಾರು 2-3 ಸಹಿಗಳನ್ನು ಮಾಡಿದ್ದೆ.

**25.** ಮುಂದುವರೆದು ಪಾಟೀಸವಾಲಿನಲ್ಲಿ, ತಾನು ಸಹಿ ಮಾಡಿದ ದಾಖಲೆಯಲ್ಲಿ ತಿದ್ದುಪಡಿಯಾದ ಬಗ್ಗೆ ವೈಟ್ನರ್ ಹಾಕಿರುವ ಬಗ್ಗೆ ತನಗೆ ತೋರಿಸಿರಲಿಲ್ಲ. ನಿಪಿ-4 ರಲ್ಲಿ ಹಲವಾರು ಕಡೆ ವೈಟ್ನರ್ ಹಚ್ಚಿ ಬರವಣಿಗೆ ಮಾಡಲಾಗಿದೆ ಎಂದರೆ ಸರಿ. ತಾನು ಹೇಳಿದ ಸ್ಥಳ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಆ ಸ್ಥಳದ ಪರಿಚಯ ಇದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಪ್ರತಿ ನಿಮಿಷವು ಸಹಾ ವಾಹನಗಳು ಸಂಚರಿಸುತ್ತಿರುತ್ತವೆ ಎಂದರೆ ಸರಿ. ಟ್ರ್ಯಾಕ್ಟರ್ ನ್ನು ಮ.2.00 ಗಂಟೆಯಿಂದ ರಸ್ತೆಯಲ್ಲಿ ನಿಲ್ಲಿಸಿದ್ದರು ಎಂದು ತನಗೆ ತಿಳಿಯಿತು. ಟ್ರ್ಯಾಕ್ಟರ್ ನ್ನು ಕೊಟ್ಟಿಗೆಹಾರದಿಂದ ಮೂಡಿಗೆರೆ ಕಡೆ ಬರುವಾಗ ರಸ್ತೆಯ ಎಡಭಾಗದಲ್ಲಿ ಸಂಪೂರ್ಣವಾಗಿ ನಿಲ್ಲಿಸಿದ್ದರು. ಟ್ರ್ಯಾಕ್ಟರ್ ನಿಲ್ಲಿಸಿದ ಸ್ಥಳದ ಬಲಭಾಗಕ್ಕೆ ವಾಹನ ಸಂಚರಿಸುವ ಸ್ಥಳವಕಾಶ ಇತ್ತ ಎನ್ನುವ ಪ್ರಶ್ನೆಗೆ ಸಾಕ್ಷಿಯು ಬಲಭಾಗಕ್ಕೆ ಹೋಗಿದ್ದರೆ ವಾಹನ ಬರುತ್ತಿತ್ತು ಎಂದು ನುಡಿಯುತ್ತಾರೆ. ರಕ್ಷಿತ್ ರವರು ಬೈಕ್ ನಲ್ಲಿ ಬರುತ್ತಿರುವಾಗ ಎದುರಿನಿಂದ ಕಾರು ಬರುತ್ತಿತ್ತು ಎಂದು ಸಾರ್ವಜನಿಕರು ಹೇಳಿದ್ದರು. ಈ ವಿಚಾರವನ್ನು ತಾನು ಪೋಲಿಸರಿಗೆ ಹೇಳಿಲ್ಲ.

**26.** ಮುಂದುವರೆದು ಪಾಟೀಸವಾಲಿನಲ್ಲಿ, ಟ್ರ್ಯಾಕ್ಟರ್ ನಿಲ್ಲಿಸಿದ್ದ ರಸ್ತೆ ಸುಮಾರು 1 ಕಿ.ಮೀ. ನೇರವಾದ ರಸ್ತೆ ಎಂದರೆ ಸರಿ. ತಾನು ಹೇಳಿದಂತೆ ಮ.2.00

ಗಂಟೆಯಿಂದಲೂ ಸಹಾ ರಸ್ತೆಗೆ ಅಡ್ಡಲಾಗಿ ಟ್ರ್ಯಾಕ್ಟರ್ ನಿಲ್ಲಿಸಿದ್ದರೆ ಈ ವಿಚಾರವನ್ನು ಸಾರ್ವಜನಿಕರು ಪೋಲಿಸರಿಗೆ ತಿಳಿಸುತ್ತಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಯಾರು ತಿಳಿಸಿಲ್ಲ ಎಂದು ನುಡಿಯುತ್ತಾರೆ. ಮೃತ ರಕ್ಷಿತ್ ರವರಿಗೆ ಸಹಾಯ ಮಾಡಲು ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ ನಿಲ್ಲಿಸಿದ ಚೆಕ್ಕುಬಂದಿ ಹೇಳಲು ಗೊತ್ತಾಗುವುದಿಲ್ಲ. ನಿಪಿ-4 ರ 1 ರಿಂದ 3 ನೇ ಪುಟದಲ್ಲಿ ತನ್ನ ಹಾಗೂ ಚಾಸಾ-10 ರವರ ಸಹಿ ಇಲ್ಲ ಎಂದರೆ ಸರಿ. ಚಾಸಾ-1 ಮತ್ತು 2 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನಿಪಿ-4 ಕ್ಕೆ ಠಾಣೆಯಲ್ಲಿ ಸಹಿ ಮಾಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಾನು ಸ್ಥಳದಲ್ಲಿ ಸಹಿ ಮಾಡುವ ಕಾಲಕ್ಕೆ ಅಲ್ಲಿ ಟ್ರ್ಯಾಕ್ಟರ್ ಮತ್ತು ಬೈಕ್ ಇರಲಿಲ್ಲ. ಅಪಘಾತವಾದ ದಿನಾಂಕದಂದು ರಾತ್ರಿ ವಾಹನಗಳನ್ನು ಠಾಣೆಗೆ ತಂದಿದ್ದರು. ಅದನ್ನು ಪೋಲಿಸರೇ ತಂದಿದ್ದರು. ವಾಹನಗಳು ಇದ್ದ ಸ್ಥಳವನ್ನು ಮಹಜರ್ ಕಾಲಕ್ಕೆ ಪೈಂಟ್ ನಿಂದ ಗುರುತಿಸಿರಲಿಲ್ಲ. ಆರೋಪಿತರ ಹೆಸರು ಮತ್ತು ವಿಳಾಸ ಹೇಳಲು ಆಗುವುದಿಲ್ಲ. ಪೋಲಿಸರು ಆರೋಪಿತರನ್ನು ಠಾಣೆಗೆ ಕರೆಸಿ ತನ್ನಿಂದ ಗುರುತಿಸಿಕೊಂಡಿಲ್ಲ.

**27.** ಮುಂದುವರೆದು ಪಾಟೀಸವಾಲಿನಲ್ಲಿ, ತಾನು ಹೇಳಿದ ಸ್ಥಳದಲ್ಲಿ ಯಾವುದೇ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ. ತಾನು ಅಪಘಾತ ಸ್ಥಳ ವನ್ನು ನೋಡಿಲ್ಲದ ಕಾರಣ ಅದರ ಚೆಕ್ಕುಬಂದಿ ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ತಾನು ಸಹಿ ಮಾಡಿದ್ದ ದಾಖಲೆಯನ್ನು ಪೋಲಿಸರು ಬರೆದಿದ್ದು ಅವರ ಹೆಸರು ತನಗೆ ಗೊತ್ತಿಲ್ಲ. ಆ ಪೋಲಿಸರು ಸದರಿ ದಾಖಲೆಗೆ ಸಹಿ ಮಾಡಿದ್ದಾರ ಎಂದು ತನಗೆ ಗೊತ್ತಿಲ್ಲ. ಆ ದಾಖಲೆ ಯಾವ ಕ್ರೈಂ.ಸಂ. ಗೆ ಸಂಬಂಧಪಟ್ಟಿದ್ದು ಎಂದು ತನಗೆ ನೆನಪಿಲ್ಲ. ತನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

**28.** ಇನ್ಡೋರ್ವ ಸಾಕ್ಷಿಯಾದ ಚಾಸಾ.10 ಅಜಿತ್.ಎಲ್.ಆರ್ ರವರನ್ನು

ಪ್ರಾಸಾ.8 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ತನಗಿದೆ. ಮೃತ ರಕ್ಷಿತ್ ತನ್ನ ಸ್ನೇಹಿತ. ಚಾಸಾ-1 ಮತ್ತು 9 ರವರ ಪರಿಚಯ ತನಗಿದೆ. ದಿನಾಂಕ 04.07.2021 ರಂದು ಪೋಲಿಸರು ತನಗು ಮತ್ತು ಚಾಸಾ-9 ರವರಿಗೂ ಮಹಜರ್ ಇದೆ ಎಂದು ಕರೆ ಮಾಡಿರುತ್ತಾರೆ. ಅದೇ ದಿನ ಮ.2.30 ರಿಂದ 3.30 ರವರೆಗೆ ಮಹಜರ್ ಕ್ರಮವನ್ನು ಡಿಪೋ ಮುಂಭಾಗ ಜರುಗಿಸಲಾಗಿರುತ್ತದೆ. ಆ ದಿನ ಚಾಸಾ-1 ರವರು ಸ್ಥಳವನ್ನು ತೋರಿಸಿರುತ್ತಾರೆ. ಸದರಿ ಸಮಯದಲ್ಲಿ ಫೋಟೋಗಳನ್ನು ತೆಗೆಯಲಾಗಿರುತ್ತದೆ. ದಿ.08.08.2022 ರಂದು KA-18-EG-2544 ಎಂಬ ಹೊಂಡಾ ಶೈನ್ ಬೈಕ್ ಮತ್ತು KA-18-TB-2393 ಎಂಬ ಟ್ರಾಕ್ಟರ್ ವಾಹನವನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ನ್ನು ಬೆ.11.00 ರಿಂದ 12.00 ರ ಸಮಯದವರೆಗೂ ಮಾಡಲಾಗಿರುತ್ತದೆ. ಅದೇ ದಿನ ತಾಲ್ಲೂಕು ಕಛೇರಿಯ ಬಳಿ ಇನ್ನೊಂದು ಮಹಜರ್ ನ್ನು ಜರುಗಿಸಿ ಸದರಿ ಸ್ಥಳದಿಂದು ಒಂದು ಟ್ರಾಕ್ಟರ್ ಟ್ರೇಲರ್ ನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ನ್ನು ಮ.12.30 ರಿಂದ 1.30 ರವರೆಗೂ ಜರುಗಿಸಲಾಗಿರುತ್ತದೆ.

**29.** ಮುಂದುವರೆದು, ಸಾಕ್ಷಿಯು ನಿಪಿ-4 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-5 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ನಿಪಿ-11 ಮತ್ತು 12 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-11(ಸಿ) ಮತ್ತು 12(ಸಿ) ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**30.** ಆರೋಪಿಗಳ ಪರ ವಕೀಲರು ಫ್ರಾಸಾ.8 ರವರನ್ನು ಪಾಟೀ ಸವಾಲು ಮಾಡಿರುತ್ತಾರೆ. ಫ್ರಾಸಾ.8 ರವರು ತಮ್ಮ ಪಾಟೀ ಸವಾಲಿನಲ್ಲಿ ತನ್ನ ಬಾಲ್ಯದಿಂದ ಮೃತ ರಕ್ಷಿತ್ ನನಗೆ ಸ್ನೇಹಿತನಾಗಿರುತ್ತಾರೆ. ಅದೇ ರೀತಿಯಾಗಿ ಚಾಸಾ-2 ರವರು ಪರಿಚಯಸ್ಥರು. ತಾನು ವೃತ್ತಿಯಲ್ಲಿ ಟ್ರಾಕ್ಟರ್ ಡ್ರೈವರ್. ಸದರಿ ಟ್ರಾಕ್ಟರ್ ತನ್ನದೇ ಆಗಿರುತ್ತದೆ. ಅಪಘಾತ ನಡೆದ ಸ್ಥಳದ ಪಕ್ಕದಲ್ಲಿ 100 ರಿಂದ 140 ರಷ್ಟು ಹೋಟೆಲ್ ಮತ್ತು ಮನೆಗಳು ಇರುತ್ತವೆ ಎಂದರೆ ಸರಿ. ಅದೇ ರೀತಿಯಾಗಿ ಸ್ವಲ್ಪ ಮುಂದೆ ಬಂದರೆ ಮೂಡಿಗೆರೆಯ ಹ್ಯಾಂಡ್ ಪೋಸ್ಟ್ ಬಳಿ ಹಲವಾರು ಹೋಟೆಲ್, ಅಂಗಡಿಗಳು ಮತ್ತು ಮಿಲ್ ಗಳು ಇರುತ್ತವೆ ಎಂದರೆ ಸರಿ. ತಾನು ಮತ್ತು ಚಾಸಾ-9 ರವರು ಮ.2.30 ರ ಸಮಯಕ್ಕೆ ಸ್ಥಳಕ್ಕೆ ಹೋಗಿರುತ್ತೇವೆ. ತಾವು ಹೋದ 15 ನಿಮಿಷದ ನಂತರ ಮಹಜರ್ ಬರವಣಿಗೆಯನ್ನು ಮಾಡಲು ಪ್ರಾರಂಭಿಸಿರುತ್ತಾರೆ. ಅದು ಎಷ್ಟು ಪುಟದಿಂದ ಕೂಡಿರುತ್ತವೆ ಎಂದು ನೋಡಿರುವುದಿಲ್ಲ. ಮಹಜರ್ ನ ಎಲ್ಲಾ ಪುಟದಲ್ಲು ತನ್ನ ಸಹಿಯನ್ನು ಪಡೆದಿರುವುದಿಲ್ಲ. ಮಹಜರ್ ನ್ನು ಬರವಣಿಗೆ ಮಾಡಿದ ವ್ಯಕ್ತಿ ನನ್ನ ಸಮಕ್ಷಮ ಸಹಿ ಮಾಡಿರುವುದನ್ನು ತಾನು ಗಮನಿಸಿರುವುದಿಲ್ಲ. ಅದು ವಾರದ ಯಾವ ದಿನ ಎಂದು ತನಗೆ ನೆನಪಾಗುತ್ತಿಲ್ಲ. ತಾನು ಸಹಿ ಮಾಡಿದ ಮಹಜರ್ ಪ್ರತಿಯಲ್ಲಿ ಯಾವುದೇ ತಿದ್ದುಪಡಿಯಾಗಿರುವುದಿಲ್ಲ. ತಾನು ಸದರಿ ಮಹಜರ್ ನ್ನು ಓದಿ ನೋಡಿರುವುದಿಲ್ಲ. ನಿಪಿ-4 ರಲ್ಲಿ ತಿದ್ದುಪಡಿಯಾಗಿರುತ್ತದೆ ಎಂದರೆ ಸರಿ. ಸದರಿ ತಿದ್ದುಪಡಿಯು ತನ್ನ ಸಮಕ್ಷಮ ಆಗಿರುವುದಿಲ್ಲ ಎಂದರೆ ಸರಿ.

**31.** ನಿಪಿ-4 ರಲ್ಲಿ ಏನು ಬರೆಯಲಾಗಿದೆ ಎಂದು ತನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಮಹಜರ್ ಮಾಡುವ ಸಮಯದಲ್ಲಿ ರಸ್ತೆಯ ಮಧ್ಯ ಭಾಗದಲ್ಲಿ ಅಪಘಾತವಾಗಿರುವ ಬಗ್ಗೆ ತಿಳಿಸಿರುತ್ತಾರೆ. ಅದೇ ರೀತಿಯಾಗಿ ಮಹಜರ್ ನಲ್ಲಿ ರಸ್ತೆಯ ಬಲಭಾಗದಲ್ಲಿ ಅಪಘಾತವಾಗಿರುವ ಬಗ್ಗೆ ನಮೂದಿಸಿರಲಿಲ್ಲ ಎಂದರೆ ತಾನು ಸಹಿ

ಮಾಡುತ್ತಿರಲಿಲ್ಲ ಎಂದರೆ ಸರಿ. ತಾನು ಹೇಳಿದ ಸಮಯವನ್ನು ನಿಪಿ-4 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಒಂದುವೇಳೆ ನಿಪಿ-4 ನ್ನು ತಾನು ಓದಿ ನೋಡಿದ್ದಿದ್ದರೆ ಅದರಲ್ಲಿ ತಪ್ಪು ಇದ್ದಲ್ಲಿ ತಾನು ಸರಿ ಪಡಿಸಲು ತಿಳಿಸುತ್ತಿದ್ದೆ ಎಂದರೆ ಸರಿ. ನಿಪಿ-5 ರಲ್ಲಿ ರಸ್ತೆಯ ಎಡಭಾಗದಲ್ಲಿ ಅಪಘಾತವಾಗಿರುವ ಬಗ್ಗೆ ತೋರಿಸಲಾಗಿದೆ ಎಂದರೆ ಸರಿ. ಅದೇ ರೀತಿಯಾಗಿ ಸದರಿ ನಿಶಾನೆಯ ಪ್ರಕಾರ ಎಡಭಾಗದಲ್ಲಿ ವಾಹನ ನಿಂತಿದ್ದರೆ ಬಲಭಾಗದಲ್ಲಿ ಹಿಂದಿನಿಂದ ಬರುವ ವಾಹನಗಳು ಮುಂದೆ ಹೋಗಬೇಕು ಎಂದರೆ ಸರಿ. ನಿಪಿ-4 ರ ಕೊನೆಯ ಪುಟವನ್ನು ತಾನು ಗಮನಿಸಿರುವುದಿಲ್ಲ. ಸದರಿ ನಕಾಶೆಯಲ್ಲಿ ಆ ದಿನ ರಸ್ತೆಯ ಎಡಭಾಗದಲ್ಲಿ ಅಪಘಾತವಾಗಿರುವುದನ್ನು ತೋರಿಸಲಾಗಿರುತ್ತದೆ ಎಂದರೆ ಸರಿ. ಬಿದರಹಳ್ಳಿಯ ಡಿಪೋದ ಅಕ್ಕ ಪಕ್ಕದಲ್ಲಿ ಕಾಲೇಜು ಮತ್ತು ಸಂಶೋಧನಾ ಕೇಂದ್ರ ಇರುವ ಕಾರಣ ವಿದ್ಯುತ್ ಶಕ್ತಿಯ ಸೌಲಭ್ಯವಿರುತ್ತದೆ ಎಂದರೆ ಸರಿ.

**32.** ಮುಂದುವರೆದು ಪಾಟೀಸವಾಲಿನಲ್ಲಿ, ಸಾಮಾನ್ಯವಾಗಿ ಸದರಿ ರಸ್ತೆಯಲ್ಲಿ ರಾತ್ರಿ ವೇಳೆಯಲ್ಲಿ ತಮ್ಮ ವಾಹನದ ಬೆಳಕು ಸರಿಯಾಗಿದ್ದಲ್ಲಿ ಮುಂದೆ ಬರುವ ವಾಹನಗಳು ಕಂಡು ಬರುತ್ತವೆ ಎಂದರೆ ಸಾಕ್ಷಿಯು ಆ ದಿನ ಮಳೆಯಾಗುತ್ತಿತ್ತು ಮತ್ತು ಟಿಂಬರ್ ಲಾರಿಯನ್ನು ನಿಲ್ಲಿಸಲಾಗಿತ್ತು ಎಂದು ನುಡಿಯುತ್ತಾರೆ. ನಿಪಿ-4 ರಲ್ಲಿ ಅಪಘಾತ ಸಂಭವಿಸಿದ ದಿನ ಮಳೆ ಬರುತ್ತಿತ್ತು ಎಂಬ ಅಂಶದ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ-4 ನ್ನು ಬರೆಯುವ ಸಮಯದಲ್ಲಿ ಮೃತ ರಕ್ಷಿತ್ ಧರಿಸಿದ ಹೆಲ್ಮೆಟ್ ನ್ನು ವಶಪಡಿಸಿಕೊಂಡಿರುವುದಿಲ್ಲ. ಅಪಘಾತವಾದ ಸ್ಥಳದ ರಸ್ತೆಯು ನೇರವಾಗಿದ್ದು, ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯಲ್ಲಿ ಪ್ರತಿನಿತ್ಯ ವಾಹನಗಳು ಸಂಚಾರ ಮಾಡುತ್ತವೆ ಎಂದರೆ ಸರಿ. ನಿಪಿ-7 ನ್ನು ಬರೆಯುವ ಸಮಯದಲ್ಲಿ ವಾಹನದ ಪಕ್ಕದಲ್ಲಿ ತನ್ನ ಫೋಟೋವನ್ನು ತೆಗೆದಿರುವುದಿಲ್ಲ. ಅದು ಎಷ್ಟು ಪುಟದಿಂದ ಕೂಡಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಸದರಿ ಮಹಜರ್ ನ

ಪ್ರತೀ ಪುಟಕ್ಕೂ ತಾನು ಸಹಿ ಮಾಡಿರುವುದಿಲ್ಲ. ತನ್ನನ್ನು ಹೊರತುಪಡಿಸಿ ಚಾಸಾ-9 ರವರು ನಿಪಿ-7 ಕ್ಕೆ ಸಹಿ ಮಾಡಿರುತ್ತಾರೆ. ನಿಪಿ-4 ಮತ್ತು 7 ನ್ನು ಬರೆದ ಸ್ಥಳದ ಚೆಕ್ಕುಬಂದಿಯನ್ನು ಹೇಳಲು ಸಾಧ್ಯವಿಲ್ಲ. ಪೋಲಿಸರು ವಶಪಡಿಸಿಕೊಂಡ ವಾಹನದ ಇಂಜಿನ್ ಮತ್ತು ಚಾರ್ಸಿ ನಂಬರನ್ನು ಹೇಳಲು ಸಾಧ್ಯವಿಲ್ಲ. ಅದನ್ನು ತಾನು ಇಲ್ಲಿಯವರೆಗೂ ನೋಡಿರುವುದಿಲ್ಲ.

**33.** ಮುಂದುವರೆದು ಪಾಟೀಸವಾಲಿನಲ್ಲಿ, ನಿಪಿ-7 ರಲ್ಲಿಯೂ ಯಾವುದೇ ತಿದ್ದುಪಡಿ ಮಾಡಿ ತನ್ನ ಸಹಿಯನ್ನು ಪಡೆದಿರುವುದಿಲ್ಲ. ನಿಪಿ-7 ರಲ್ಲಿ ತಿದ್ದುಪಡಿಯನ್ನು ಮಾಡಿ ರಾಮು ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ತಾನು ನಿಪಿ-4 ಮತ್ತು 7 ಕ್ಕೆ ಚಾಸಾ-1 ಮತ್ತು 2 ರವರ ಮಾತು ಕೇಳಿ ಮೂಡಿಗೆರೆಯ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆದ ಕಾರಣ ಅದರಲ್ಲಿ ಏನು ಬರೆಯಲಾಗಿದೆ ಮತ್ತು ಅದನ್ನು ತಿದ್ದುಪಡಿ ಮಾಡಿರುವ ಬಗ್ಗೆ ನಿಖರವಾಗಿ ಹೇಳಲು ಸಾಧ್ಯವಾಗುತ್ತಿಲ್ಲ ಎಂದರೆ ಸರಿಯಲ್ಲ. ತಾನು ತನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

**34.** ತನಿಖಾಧಿಕಾರಿಯಾದ ಚಾಸಾ.24 ಸತ್ಯನಾರಾಯ ರವರನ್ನು ಫ್ರಾಸಾ.4 ರಂತೆ, ಚಾಸಾ.23 ಸೋಮಶೇಖರ್.ಜೆ.ಸಿ ರವರನ್ನು ಫ್ರಾಸಾ.5 ರಂತೆ, ಚಾಸಾ.22 ಆದರ್ಶ್.ಎಂ.ಎಸ್ ರವರನ್ನು ಫ್ರಾಸಾ.6 ರಂತೆ, ಚಾಸಾ.18 ಗುರುರಾಜ್ ರವರನ್ನು ಫ್ರಾಸಾ.7 ರಂತೆ ಹಾಗೂ ಚಾಸಾ.25 ಸೋಮೇಗೌಡ.ಪಿ.ಪಿ ರವರನ್ನು ಫ್ರಾಸಾ.9 ರಂತೆ, ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಗಳು ತಮ್ಮ ಸಾಕ್ಷ್ಯದಲ್ಲಿ ತಾವು ಕೈಗೊಂಡ ತನಿಖೆ ಕ್ರಮಗಳ ಕುರಿತು ಸಾಕ್ಷ್ಯವನ್ನು ನುಡಿದಿರುತ್ತಾರೆ. ಆರೋಪಿಗಳ ಪರ ವಕೀಲರು ಈ ಮೇಲಿನ ಸಾಕ್ಷಿಗಳನ್ನು ಪಾಟೀ ಸವಾಲು ಮಾಡಿರುತ್ತಾರೆ.

**35.** ಒಟ್ಟಾರೆಯಾಗಿ ಮಾನ್ಯ ಅಭಿಯೋಜನೆಯು ಹಾಜರುಪಡಿಸಿದ ಸಾಕ್ಷ್ಯಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಅಭಿಯೋಜನೆಯ ವಾದವೇನೆಂದರೇ, ಫ್ರಾಸಾ1 ರವರು ಮೃತಪಟ್ಟ ರಕ್ಷಿತ್ ರವರ ತಂದೆಯಾಗಿದ್ದು, ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ಹೇಳಿದರೂ ಸಹ ನಿಪಿ1 ರಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ ಮತ್ತು ನಿಪಿ4 ನಕ್ಷೆಯನ್ನೂ ಸಹ ತನ್ನ ಮುಂದೆ ಬರೆದಿಲ್ಲ ಎಂದು ಪಾಟೀಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಸದರಿ ಸಾಕ್ಷಿಯು ಪ್ರತ್ಯಕ್ ಸಾಕ್ಷಿಯಾಗಿರುವುದಿಲ್ಲ. ಅವರು ಚಾಸಾ9 ರವರು ದೂರವಾಣಿ ಕರೆ ಮಾಡಿ ಅಪಘಾತದ ಬಗ್ಗೆ ತಿಳಿಸಿರುವುದಾಗಿ ನುಡಿದಿರುತ್ತಾರೆ ಮತ್ತು ಮಹಜರ್ ಸ್ಥಳದ ಚಕ್ಕುಬಂದಿಯನ್ನೂ ಸಹ ಹೇಳಲು ಬರುವುದಿಲ್ಲವೆಂದು ನುಡಿದಿರುತ್ತಾರೆ. ಆರೋಪಿತ ಟ್ರಾಕ್ಟರ್ ಟೈರ್ ಪಂಚರಾಗಿ ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿರುವುದನ್ನೂ ಸಹ ಒಪ್ಪಿರುತ್ತಾರೆ.

**36.** ಇನ್ನೂ ಫ್ರಾಸಾ.2 ಕುಮಾರ್ ರವರೂ ತಮ್ಮ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಯ ವಾದವನ್ನು ಬೆಂಬಲಿಸಿರುತ್ತಾರೆ. ಆದರೆ ಇವರೂ ಸಹ ಪ್ರತ್ಯಕ್ಷ ಸಾಕ್ಷಿಯಾಗಿರುವುದಿಲ್ಲ ಮತ್ತು ಇವರು ಫ್ರಾಸಾ1 ರವರ ಪಕ್ಕದ ಮನೆಯ ವಾಸಿ ಎಂದು ಒಪ್ಪಿರುತ್ತಾರೆ. ಫ್ರಾಸಾ2 ರವರು ತಮ್ಮ ಪಾಟೀಸವಾಲಿನಲ್ಲಿ ಆರೋಪಿತ ವಾಹನಗಳು ರಸ್ತೆಯ ಎಡಭಾಗದಲ್ಲಿ ಇದ್ದವು ಎಂದು ಒಪ್ಪಿಕೊಂಡಿರುತ್ತಾರೆ.

**37.** ಚಾಸಾ9/ಫ್ರಾಸಾ3 ರವರು ಮತ್ತು ಮೃತ ರಕ್ಷಿತ್ ರವರು ಸ್ನೇಹಿತರಾಗಿದ್ದು, ಇವರೂ ಸಹ ಪ್ರತ್ಯಕ್ಷ ಸಾಕ್ಷಿಯಾಗಿರುವುದಿಲ್ಲ ಮತ್ತು ಇವರು ಮಹಜರ್ ಸ್ಥಳದ ಚಕ್ಕುಬಂದಿಯನ್ನೂ ಸಹ ಹೇಳಲು ಬರುವುದಿಲ್ಲವೆಂದು ಒಪ್ಪಿರುತ್ತಾರೆ. ಆರೋಪಿತ ಟ್ರಾಕ್ಟರ್ ಅನ್ನೂ ರಸ್ತೆಯ ಎಡಭಾಗದಲ್ಲಿ ಸಂಪೂರ್ಣವಾಗಿ ನಿಲ್ಲಿಸಿರುವ ಬಗ್ಗೆ ತಮ್ಮ

ಪಾಟೀಸವಾಲಿನಲ್ಲಿ ಒಪ್ಪಿರುತ್ತಾರೆ.

**38.** ಇನ್ನೂ ಚಾಸಾ10/ಫ್ರಾಸಾ8 ಅಜಿತ್.ಎಲ್.ಆರ್ ರವರು ಮಹಜರ್ ಸಾಕ್ಷಿಯಾಗಿದ್ದು, ಇವರೂ ಸಹ ರಕ್ಷಿತ್ ರವರ ಸ್ನೇಹಿತರಾಗಿರುತ್ತಾರೆ ಮತ್ತು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಪಾಟೀಸವಾಲಿನಲ್ಲಿ ನಿಪಿ4 ಮಹಜರ್ ನಲ್ಲಿನ ಚಕ್ಕುಬಂದಿಯನ್ನು ಹೇಳಲು ಬರುವುದಿಲ್ಲವೆಂದು ಒಪ್ಪಿರುತ್ತಾರೆ. ಸದರಿ ದಾಖಲೆ ತಿದ್ದುಪಡಿಯಾಗಿದ್ದು, ಅದು ನಮ್ಮ ಮುಂದೆ ಆಗಿಲ್ಲವೆಂದು ಪಾಟೀಸವಾಲಿನಲ್ಲಿ ಒಪ್ಪಿರುತ್ತಾರೆ.

**39.** ತನಿಖಾಧಿಕಾರಿಗಳಾದ ಫ್ರಾಸಾ.4 ರಿಂದ 7 ಮತ್ತು 9 ರವರು ಮಾನ್ಯ ಅಭಿಯೋಜನೆಯ ವಾದವನ್ನು ಬೆಂಬಲಿಸಿದರೂ ಸಹಿತ, ಸದರಿ ಸಾಕ್ಷಿಗಳ ಸಾಕ್ಷ್ಯಕ್ಕೆ ಹೆಚ್ಚಿನ ಮಹತ್ವವಿಲ್ಲವೆಂದು ಹೇಳಬಹುದು. ಕಾರಣವೇನೆಂದರೇ, ಪ್ರಸ್ತುತ ಪ್ರಕರಣದಲ್ಲಿ ಯಾವುದೇ ಪ್ರತ್ಯಕ್ಷ ಸಾಕ್ಷಿಗಳು ಇರುವುದಿಲ್ಲ ಮತ್ತು ನ್ಯಾಯಾಲಯದ ಮುಂದೆ ಸಾಕ್ಷಿ ನುಡಿದ ಫ್ರಾಸಾ1 ರಿಂದ 3 ಮತ್ತು 8 ರವರುಗಳು ಮೃತರಿಗೆ ಮತ್ತು ಫ್ರಾಸಾ1 ರವರಿಗೆ ಪರಿಚಯಸ್ಥರಾಗಿದ್ದು, ಆರೋಪಿತ ಟ್ರಾಕ್ಟರ್ ರಸ್ತೆಯ ಎಡಭಾಗದಲ್ಲಿ ನಿಂತಿರುವುದನ್ನು ಒಪ್ಪಿರುತ್ತಾರೆ ಮತ್ತು ಮೃತ ರಕ್ಷಿತ್ ರವರು ಹೆಲ್ಮೆಟ್ ಧರಿಸಿರುವ ಬಗ್ಗೆ ತಿಳಿಸಿದರೂ ಸಹ ಸದರಿ ಹೆಲ್ಮೆಟ್ ಅನ್ನು ಪೊಲೀಸ್ ನವರು ವಶಪಡಿಸಿಕೊಂಡಿರುವುದಿಲ್ಲ ಮತ್ತು ಆರೋಪಿತ ಟ್ರಾಕ್ಟರ್ ಚಾಲನಾ ಸ್ಥಿತಿಯಲ್ಲಿ ಇಲ್ಲದೇ ಟೈರ್ ಪಂಚರಾಗಿ ರಸ್ತೆಯ ಎಡಭಾಗದಲ್ಲಿ ನಿಂತಿರುವುದೂ ಅಭಿಯೋಜನೆಯ ಸಾಕ್ಷಿಯಿಂದ ಕಂಡುಬಂದಿರುತ್ತದೆ. ಇದರಿಂದ ಸದರಿ ಆರೋಪಿತ ಟ್ರಾಕ್ಟರ್ ಚಾಲನಾ ಸ್ಥಿತಿಯಲ್ಲಿ ಇಲ್ಲದಿರುವುದು ಅಭಿಯೋಜನೆಯ ಸಾಕ್ಷಾಧಾರಗಳಿಂದಲೇ ಸಾಬೀತಾಗಿರುತ್ತದೆ. ಆದ್ದರಿಂದ ಸದರಿ ವಾಹನಕ್ಕೆ ವಿಮೆ ಮಾಡಿಸುವ ಪ್ರಶ್ನೆಯೇ

ಉದ್ಭವಿಸುವುದಿಲ್ಲ ಮತ್ತು ಸದರಿ ವಾಹನ ರಸ್ತೆಯ ಎಡಭಾಗದಲ್ಲಿ ನಿಂತಿರುವ ಬಗ್ಗೆ ಅಭಿಯೋಜನೆಯ ಸಾಕ್ಷಿಗಳು ನುಡಿದಿರುತ್ತಾರೆ. ಆದ್ದರಿಂದ ಸದರಿ ವಾಹನ ರಸ್ತೆಗೆ ಅಡ್ಡವಾಗಿ ನಿಂತಿತ್ತು ಎಂಬ ಅಂಶವೂ ಸಹ ಅನುಮಾನಾಸ್ಪದವಾಗಿರುತ್ತದೆ. 1 ನೇ ಆರೋಪಿಯೇ ಅಭಿಯೋಜನೆ ಪ್ರಕಾರ ಅಪರಾಧಿಯಾಗಿದ್ದು, ಆತನ ನಿರ್ಲಕ್ಷತೆಯೇ ಅಪಘಾತಕ್ಕೆ ಕಾರಣ ಎಂಬ ಅಂಶಗಳು ಮೇಲೆ ಹೇಳಿದ ಸಾಕ್ಷ್ಯಾದಾರಗಳಿಂದ ಕಂಡುಬರುತ್ತಿದ್ದು, ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಮೃತ 1 ನೇ ಆರೋಪಿ ರಕ್ಷಿತ್ ಅಪಘಾತದಿಂದ ಮರಣ ಹೊಂದಿರುವುದು ರುಜುವಾತಾದರೂ ಸಹ 2 ಮತ್ತು 3 ನೇ ಆರೋಪಿಗಳ ನಿರ್ಲಕ್ಷತನದಿಂದ ಅಪಘಾತವಾಗಿದ್ದು, ಆದ್ದರಿಂದ 1 ನೇ ಆರೋಪಿ ರಕ್ಷಿತ್ ರವರು ಮೃತಪಟ್ಟಿರುವುದನ್ನು ಅಭಿಯೋಜನೆಯು ರುಜುವಾತುಪಡಿಸುವಲ್ಲಿ ವಿಫಲವಾಗಿರುವುದು ಕಂಡುಬಂದಿರುತ್ತದೆ ಮತ್ತು ಇಲಾಖಾ ಮತ್ತು ತನಿಖಾ ಸಾಕ್ಷಿಗಳಾದ ಫ್ರಾಸಾ4 ರಿಂದ 7 ಮತ್ತು 9 ರವರು ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿದಿದ್ದರೂ ಸಹ ಮೇಲೆ ಹೇಳಿದ ಸಾಕ್ಷಿಗಳನ್ನು ಹೊರತುಪಡಿಸಿ ಯಾವುದೇ ಸ್ವತಂತ್ರ ಪ್ರತ್ಯಕ್ಷ ಮತ್ತು ಮಹಜರ್ ಸಾಕ್ಷಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಲ್ಲಿ ಮತ್ತು ತಮ್ಮ ವಾದವನ್ನು ರುಜುವಾತುಪಡಿಸುವಲ್ಲಿ ಮಾನ್ಯ ಅಭಿಯೋಜನೆಯು ವಿಫಲವಾಗಿರುತ್ತದೆ.

**40.** ಮಾನ್ಯ ಅಭಿಯೋಜನೆಯು ಆರೋಪಿಯು ಟ್ರಾಕ್ಟರ್ ವಾಹನವನ್ನು ಅಜಾಗರೂಕತೆಯಿಂದ ರಸ್ತೆಯಲ್ಲಿ ನಿಲ್ಲಿಸಿದ್ದು ಅದರ ಫಲವಾಗಿ ಅಪಘಾತವಾಗಿರುವ ಅಂಶವನ್ನು ರುಜುವಾತುಪಡಿಸಬೇಕಾಗಿರುತ್ತದೆ. ಆದರೇ, ಸದರಿ ಅಂಶಕ್ಕೆ ಪೂರಕವಾಗಿ ತಮ್ಮ ಪರವಾಗಿ ನಿಸ್ಸಂಶಯಾತೀತವಾಗಿ ಸಾಕ್ಷ್ಯವನ್ನು ನುಡಿಸಿಕೊಳ್ಳಲು ವಿಫಲವಾಗಿರುತ್ತದೆ. ಹಾಗಾಗಿ 1 ನೇ ಆರೋಪಿಯು ತಮ್ಮ ವಾಹನವನ್ನು ಅತಿವೇಗವಾಗಿ ಮತ್ತು ಅಜಾಗರೂತೆಯಿಂದ ಚಾಲನೇ ಮಾಡಿ ಅಪಘಾತವನ್ನುಂಟು ಮಾಡಿರುವ ಅಂಶವು

ಅಭಿಯೋಜನೆಯ ವಾದದಿಂದಲೇ ರುಜುವಾತುಪಟ್ಟಿರುತ್ತದೆ. ಆದರೆ, 2 ಮತ್ತು 3 ನೇ ಆರೋಪಿಗಳ ನಿರ್ಲಕ್ಷತೆಯನ್ನು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ. ಈ ಎಲ್ಲ ಸಾಕ್ಷಿಗಳ ಸಾಕ್ಷ್ಯವನ್ನು ಗಣನೆಗೆ ತೆಗೆದುಕೊಂಡಾಗ, ಈ ಅಪಘಾತವು 2 ಮತ್ತು 3 ನೇ ಆರೋಪಿಗಳ ತಪ್ಪಿನಿಂದಲೇ ಆಗಿರುತ್ತದೆ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಆದಕಾರಣ 2 ಮತ್ತು 3 ನೇ ಆರೋಪಿಗಳ ಟ್ರಾಕ್ಟರ್ ವಾಹನವನ್ನು ಯಾವುದೇ ವಿಮೆಯನ್ನು ಮಾಡಿಸದೇ ಇರುವ ಪ್ರಶ್ನೆ ಉದ್ಭವಿಸುವುದಿಲ್ಲ ಹಾಗೂ ಸದರಿ ವಾಹನವನ್ನು ರಸ್ತೆಯಲ್ಲಿ ತೊಂದರೆಯಾಗುವ ರೀತಿ ನಿಲ್ಲಿಸಿರುತ್ತಾರೆ ಎಂಬ ಅಂಶವೂ ಸಹ ಅನಮಾನಾಸ್ಪದದಿಂದ ಕೂಡಿದೆ.

**41.** ಮೇಲ್ಕಂಡ ವಿವರಣೆಯ ಆಧಾರದಲ್ಲಿ, ನ್ಯಾಯಾಲಯದ ದೃಷ್ಠಿಯಲ್ಲಿ, ಮಾನ್ಯ ಅಭಿಯೋಜನೆಯು 2 ಮತ್ತು 3 ನೇ ಆರೋಪಿಗಳ ಮೇಲೆ ಹೊರಿಸಿದ ಆರೋಪಣೆಗಳನ್ನು ಸಾಬೀತುಪಡಿಸುವ ನಂಬಲು ಅರ್ಹವಾದ ಪೂರಕ ಸಾಕ್ಷ್ಯವನ್ನು ಅಭಿಯೋಜನೆಯು ರುಜುವಾತುಪಡಿಸಲು ವಿಫಲವಾದ ಕಾರಣ, ಸಂಶಯದ ಲಾಭವನ್ನು ಪ್ರಸ್ತುತ ಪ್ರಕರಣದ 2 ಮತ್ತು 3 ನೇ ಆರೋಪಿತರಿಗೆ ವಿಸ್ತರಿಸುತ್ತಾ ನ್ಯಾಯಾಲಯವು ಅಂಶ-1 ರಿಂದ 4 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**ಅಂಶ-5 :-**

**42.** ಮೇಲಿನ ಅಂಶ-1 ರಿಂದ 4 ರಲ್ಲಿ ಚರ್ಚಿಸಿದ ಕಾರಣಗಳಿಂದ, ಈ ಕೆಳಕಂಡಂತೆ;

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ.255(1)ರಡಿ, 2 ನೇ ಆರೋಪಿಯನ್ನು ಮೋಟಾರು ವಾಹನಗಳ ಅಧಿನಿಯಮ ಕಲಂ.283 ಮತ್ತು ಭಾರತ ದಂಡ ಸಂಹಿತೆ ಕಲಂ.304(ಎ) ರಡಿಯಲ್ಲಿ ಆರೋಪಿಸಲಾದ ಶಿಕ್ಷಾರ್ಹ ಅಪರಾಧಗಳು ಸಾಬೀತಾಗಿಲ್ಲವೆಂದು ಪರಿಗಣಿಸಿ, ಬಿಡುಗಡೆ ಮಾಡಲಾಗಿದೆ ಹಾಗೂ

2 ಮತ್ತು 3 ನೇ ಆರೋಪಿಗಳನ್ನು ಮೋಟಾರು ವಾಹನಗಳ ಅಧಿನಿಯಮ ಕಲಂ.196 ಮತ್ತು 192(1) ರಡಿಯಲ್ಲಿ ಆರೋಪಿಸಲಾದ ಶಿಕ್ಷಾರ್ಹ ಅಪರಾಧಗಳು ಸಾಬೀತಾಗಿಲ್ಲವೆಂದು ಪರಿಗಣಿಸಿ, ಬಿಡುಗಡೆ ಮಾಡಲಾಗಿದೆ.

2 ಮತ್ತು 3 ನೇ ಆರೋಪಿಗಳ ಬಂಧಪತ್ರಗಳು ಮತ್ತು ಅವರ ಜಾಮೀನುದಾರರ ಬಂಧಪತ್ರಗಳು ಮುಂದಿನ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ.

ಪಿ.ಎಫ್.ಸಂ.115/2022 ಮತ್ತು ಪಿ.ಎಫ್.ಸಂ.116/2022 ರ ರಲ್ಲಿರುವ ವಾಹನಗಳಿಗೆ ಸಂಬಂಧಪಟ್ಟಂತೆ ಮಾಡಿದ ಮಧ್ಯಂತರ

ಸುಪರ್ದಿ ಆದೇಶಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ಸ್ಥಿರೀಕರಿಸಲಾಗಿದೆ.

*(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ನೀಡಿ, ನಂತರ ಅದು ನನ್ನಿಂದ ಪರಿಷ್ಕರಿಸಲ್ಪಟ್ಟು, ಈ ದಿನಾಂಕ **25 ನೇ ಜುಲೈ 2026** ಇಸವಿಯಂದು ತೆರೆದ ನ್ಯಾಯಾಲಯದಲ್ಲಿ ಓದಲಾಯಿತು)*

YOGESH M R
Digitally signed by YOGESH M R
Date: 2026.07.25 17:39:38 +0530

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಮೂಡಿಗೆರೆ.

**-: ಅನುಬಂಧ :-**

**ಅಭಿಯೋಜನೆಯವರ ಪರ ಮಾಡಿಸಲಾದ ಸಾಕ್ಷಿಗಳ ಪಟ್ಟಿ:**

ಪ್ರಾಸಾ.1 - ರಾಮು.ಎಲ್.ಎ
ಪ್ರಾಸಾ.2 - ಕುಮಾರ್
ಪ್ರಾಸಾ.3 - ಮಧನ್
ಪ್ರಾಸಾ.4 - ಸತ್ಯನಾರಾಯಣ
ಪ್ರಾಸಾ.5 - ಸೋಮಶೇಖರ್.ಜೆ.ಸಿ
ಪ್ರಾಸಾ.6 - ಆದರ್ಶ್.ಎಂ.ಎಸ್
ಪ್ರಾಸಾ.7 - ಗುರುರಾಜ್
ಪ್ರಾಸಾ.8 - ಅಜಿತ್.ಎಲ್.ಆರ್
ಪ್ರಾಸಾ.9 - ಸೋಮೇಗೌಡ.ಪಿ.ಪಿ

**<u>ಅಭಿಯೋಜನೆಯವರ ಪರವಾಗಿ ಪ್ರದರ್ಶಿಕೆ ಮಾಡಲಾದ ದಾಖಲೆಗಳು :</u>**

| | | |
|---|---|---|
| ನಿಪಿ.1 | - | ದೂರು |
| ನಿಪಿ.1(ಎ) | - | ಫ್ರಾಸಾ.1 ರವರ ಸಹಿ |
| ನಿಪಿ.1(ಬಿ) | - | ಫ್ರಾಸಾ.7 ರವರ ಸಹಿ |
| ನಿಪಿ.2 | - | ಪ್ರಥಮ ವರ್ತಮಾನ ವರದಿ |
| ನಿಪಿ.2(ಎ) | - | ಫ್ರಾಸಾ.1 ರವರ ಸಹಿ |
| ನಿಪಿ.2(ಬಿ) | - | ಫ್ರಾಸಾ.7 ರವರ ಸಹಿ |
| ನಿಪಿ.3 | - | ಶವ ಪಂಚನಾಮೆ |
| ನಿಪಿ.3(ಎ) | - | ಫ್ರಾಸಾ.1 ರವರ ಸಹಿ |
| ನಿಪಿ.3(ಬಿ) | - | ಫ್ರಾಸಾ.2 ರವರ ಸಹಿ |
| ನಿಪಿ.3(ಸಿ) | - | ಫ್ರಾಸಾ.6 ರವರ ಸಹಿ |
| ನಿಪಿ.4 | - | ಸ್ಥಳ ಪಂಚನಾಮೆ |
| ನಿಪಿ.4(ಎ) | - | ಫ್ರಾಸಾ.1 ರವರ ಸಹಿ |
| ನಿಪಿ.4(ಬಿ) | - | ಫ್ರಾಸಾ.3 ರವರ ಸಹಿ |
| ನಿಪಿ.4(ಸಿ) | - | ಫ್ರಾಸಾ.5 ರವರ ಸಹಿ |
| ನಿಪಿ.4(ಡಿ) | - | ಫ್ರಾಸಾ.8 ರವರ ಸಹಿ |
| ನಿಪಿ.5 | - | ಛಾಯಾಚಿತ್ರ |
| ನಿಪಿ.6 | - | ಅಡಕ ಮುದ್ರಿಕೆ |
| ನಿಪಿ.7 | - | ಕಲಂ 65(ಬಿ) ರಡಿಯಲ್ಲಿನ ಹೇಳಿಕೆ |
| ನಿಪಿ.7(ಎ) | - | ಫ್ರಾಸಾ.9 ರವರ ಸಹಿ |
| ನಿಪಿ.8 | - | ಇಂಡೆಮ್ನಿಟಿ ಬಾಂಡ್ |
| ನಿಪಿ.8(ಎ) | - | ಫ್ರಾಸಾ.1 ರವರ ಸಹಿ |
| ನಿಪಿ.9, 10 | - | ಛಾಯಾಚಿತ್ರಗಳು |

| | | |
|---|---|---|
| ನಿಪಿ.11, 12 | - | ಪಂಚನಾಮೆಗಳು |
| ನಿಪಿ.11(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.11(ಬಿ) | - | ಪ್ರಾಸಾ.5 ರವರ ಸಹಿ |
| ನಿಪಿ.11(ಸಿ) | - | ಪ್ರಾಸಾ.8 ರವರ ಸಹಿ |
| ನಿಪಿ.12(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.12(ಬಿ) | - | ಪ್ರಾಸಾ.5 ರವರ ಸಹಿ |
| ನಿಪಿ.12(ಸಿ) | - | ಪ್ರಾಸಾ.8 ರವರ ಸಹಿ |
| ನಿಪಿ.13 | - | ಪೊಲೀಸ್ ನೋಟಿಸ್ |
| ನಿಪಿ.13(ಎ) | - | ಪ್ರಾಸಾ.4 ರವರ ಸಹಿ |
| ನಿಪಿ.14 | - | ಕಲಂ 133 ನೇ ಐ.ಎಂ.ವಿ ಆಕ್ಟ್ ರಡಿಯಲ್ಲಿನ ನೋಟೀಸ್ |
| ನಿಪಿ.14(ಎ) | - | ಪ್ರಾಸಾ.4 ರವರ ಸಹಿ |
| ನಿಪಿ.15, 16 | - | ಉತ್ತರಗಳು |
| ನಿಪಿ.15(ಎ) | - | ಪ್ರಾಸಾ.4 ರವರ ಸಹಿ |
| ನಿಪಿ.16(ಎ) | - | ಪ್ರಾಸಾ.4 ರವರ ಸಹಿ |
| ನಿಪಿ.17 | - | ಕಲಂ 41 ಎ ರಡಿಯಲ್ಲಿನ ನೋಟೀಸ್ |
| ನಿಪಿ.17(ಎ) | - | ಪ್ರಾಸಾ.4 ರವರ ಸಹಿ |
| ನಿಪಿ.18 | - | ಜ್ಞಾಪನಾ ಪತ್ರ |
| ನಿಪಿ.18(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.18(ಬಿ) | - | ಪ್ರಾಸಾ.6 ರವರ ಸಹಿ |
| ನಿಪಿ.19 | - | ವರದಿ |
| ನಿಪಿ.19(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.20, 21 | - | ಪೊಲೀಸ್ ನೋಟೀಸ್ ಗಳು |
| ನಿಪಿ.20(ಎ) | - | ಪ್ರಾಸಾ.5 ರವರ ಸಹಿ |

| | | |
|---|---|---|
| ನಿಪಿ.21(ಎ) | - | ಫ್ರಾಸಾ.5 ರವರ ಸಹಿ |
| ನಿಪಿ.22 | - | ಶವ ಸಂದ ರಶೀದಿ |
| ನಿಪಿ.22(ಎ) | - | ಫ್ರಾಸಾ.6 ರವರ ಸಹಿ |
| ನಿಪಿ.23 | - | ಐ.ಎಂ.ವಿ ವರದಿ |
| ನಿಪಿ.23(ಎ) | - | ಫ್ರಾಸಾ.9 ರವರ ಸಹಿ |
| ನಿಪಿ.24 | - | ನಷ್ಟ ಭರ್ತಿ ಪರಿಹಾರದ ಪ್ರತಿ |
| ನಿಪಿ.24(ಎ) | - | ಫ್ರಾಸಾ.9 ರವರ ಸಹಿ |
| ನಿಪಿ.25 | - | ಹೇಳಿಕೆ ಬಾಂಡ್ |
| ನಿಪಿ.25(ಎ) | - | ಫ್ರಾಸಾ.9 ರವರ ಸಹಿ |
| ನಿಪಿ.26-29 | - | ಛಾಯಾಚಿತ್ರಗಳು |

**ಅಭಿಯೋಜನೆಯವರ ಪರ ಗುರುತಿಸಲಾದ ಮುದ್ದೆಮಾಲುಗಳು : ಇಲ್ಲ**

**ಆರೋಪಿಗಳ ಪರ ವಿಚಾರಣೆಯಾದ ಸಾಕ್ಷಿದಾರರು : ಇಲ್ಲ**

**ಆರೋಪಿಗಳ ಪರ ಪ್ರದರ್ಶಿಕೆ ಮಾಡಲಾದ ದಾಖಲೆಗಳು : ಇಲ್ಲ**

YOGESH M R
Digitally signed by YOGESH M R
Date: 2026.07.25 17:39:30 +0530

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಮೂಡಿಗೆರೆ.

VP

Visit ecourts.gov.in for updates or download mobile app “eCourts Services” from Android or iOS